# ಜನ ಸೇವಕ

ಅಭಿವೃದ್ಧಿಯ ಪರ್ವ

ಸಂಪುಟ 01, ಸಂಚಿಕೆ 02, ಫೆಬ್ರವರಿ 2022, ಯಲ್ಲಾಪುರ

ಬನವಾಸಿ ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕೆ ಕಾರ್ಯಾದೇಶ:ಶೀಘ್ರವೇ ಕಾಮಗಾರಿಗೆ ಭೂಮಿಪೂಜೆ

ಕೆ.ಡಿ.ಸಿ.ಸಿ ಬ್ಯಾಂಕ್ ಮೂಲಕ ಶೈಕ್ಷಣಿಕ ಸಾಲ ಸೌಲಭ್ಯ

ಮಿಂಚಿನ ಓಟದ ಪ್ರತಿಭೆ ಮುಂಡಗೋಡದ ಎನ್.ಎಸ್. ಸಿಮಿ




## ಶ್ರಮಿಕರಿಗಾಗಿ ರಾಜ್ಯದಲ್ಲಿ "ಶ್ರಮಿಕ್‌ಸಂಜೀವಿನಿ" ಕಾರ್ಮಿಕ ಇಲಾಖೆಯಿಂದ ಮಹತ್ವಾಕಾಂಕ್ಷೆಯ ಯೋಜನೆ ಜಾರಿ

ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಮಾಹಿತಿಯನ್ನು ಹೊಂದಿರುವ ಡಿಜಿಟಲ್ ಸಂಚಿಕೆ



ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ಅವರೊಂದಿಗೆ ಹುಬ್ಬಳ್ಳಿಯಲ್ಲಿ ಕಾರ್ಮಿಕ ಭವನವನ್ನು ಉದ್ಘಾಟಿಸಿದರು.





ಶ್ರಮಿಕ ಸಂಜೀವಿನಿ ಸಂಚಾರಿ ಚಿಕಿತ್ಸಾ ಘಟಕಕ್ಕೆ ಹುಬ್ಬಳ್ಳಿಯಲ್ಲಿ ಚಾಲನೆ ನೀಡಿದರು.



ಬೆಂಗಳೂರಿನ ರಾಜಾಜಿನಗರದ ರಾಜ್ಯ ಕಾರ್ಮಿಕ ವಿಮಾ ಆಸ್ಪತ್ರೆಯಲ್ಲಿ ನೂತನ ಆಕ್ಸಿಜನ್ ಉತ್ಪಾದನಾ ಘಟಕವನ್ನು ಉದ್ಘಾಟಿಸಿದರು.




ಹೆಬ್ಬಾರ್ ಡ್ರೀಮ್ ಫೌಂಡೇಶನ್ ಟ್ರಸ್ಟ್ ವತಿಯಿಂದ ಯಲ್ಲಾಪುರ ಪಟ್ಟಣ ಪಂಚಾಯತಕ್ಕೆ ಮುಕ್ತಿ ವಾಹನವನ್ನು ಹಸ್ತಾಂತರಿಸಿದರು.



ಯಲ್ಲಾಪುರ ಯುವಮೋರ್ಚಾ ಘಟಕದ ವತಿಯಿಂದ ಆಯೋಜಿಸಿದ್ದ ಕಮಲ ಟ್ರೋಫಿ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿದರು.




ಗ್ರಾಮ ಒನ್ ವಿನೂತನ ಯೋಜನೆಗೆ ಹಾವೇರಿ ಜಿಲ್ಲೆ ಎನ್.ಎಮ್.ತಡಸ ಗ್ರಾಮದಲ್ಲಿ ಚಾಲನೆ ನೀಡಿದರು



73 ನೇ ಗಣರಾಜ್ಯೋತ್ಸವದ ಅಂಗವಾಗಿ ಹಾವೇರಿನಗರದ ದಿ. ಹೊಸಮನಿ ಸಿದ್ದಪ್ಪ  ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಿಸಿ ಗೌರವವಂದನೆ ಸ್ವೀಕರಿಸಿದರು.



ಒಂದು ಕ್ಷಣದ ಸಿಟ್ಟಿನಿಂದ ನೀವು ಪಾರಾದರೆ, ನಾಲ್ಕು ದಿನಗಳ ದು:ಖದಿಂದ ಪಾರಾದಿರಿ ಎನ್ನಬಹುದು

- **ಸ್ವಾಮಿ ವಿವೇಕಾನಂದ**

ಸಂಪುಟ 01, ಸಂಚಿಕೆ 02, ಫೆಬ್ರವರಿ 2022, ಯಲ್ಲಾಪುರ

# ಪುಟ ಬಿಂಬ


» **ನೆನಪಿನಂಗಳ** 4

» **ಅಭಿವೃದ್ಧಿಯ ಮಹಾ ಪರ್ವ**

- ಹೈಟೆಕ್ ಬಸ್ ನಿಲ್ದಾಣ 5
- ಸೂರಿಲ್ಲದವರಿಗೆ ಒಂದು ಸೂರು 6
- ಬನವಾಸಿ ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕೆ ಕಾರ್ಯಾದೇಶ 7
- ಕೋಟ್ಯಾಂತರ ಹಣದ ಅನುದಾನ, ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ 9

» **ನಮ್ಮೂರ ಸಾಧಕರು**

- ಯುವ ಪ್ರಗತಿಪರ ಕೃಷಿಕ ಪ್ರಸಾದ 11
- ಅದ್ಭುತ ಪ್ರತಿಭೆ ಅಬ್ದುಲ್ ಮಥೀನ್ 13
- ಮಿಂಚಿನ ಓಟದ ಪ್ರತಿಭೆ ಎನ್.ಎಸ್. ಸಿಮಿ 14

» **ಗರ್ಭಿಣಿ ಮಹಿಳೆಯರ ಆಪತ್ಭಾಂದವರಾದ ಆಂಬುಲೆನ್ಸ್ ಸಿಬ್ಬಂದಿಗಳು** 16

» **ಶ್ರಮಿಕರಿಗಾಗಿ ರಾಜ್ಯದಲ್ಲಿ "ಶ್ರಮಿಕ್ ಸಂಜೀವಿನಿ"** 18

» **ಕೆ.ಡಿ.ಸಿ.ಸಿ ಬ್ಯಾಂಕ್ ಮೂಲಕ ಶೈಕ್ಷಣಿಕ ಸಾಲ ಸೌಲಭ್ಯ** 20

» **ಕೊಟ್ಟಮಾತು ಉಳಿಸಿಕೊಂಡ ಹೆಬ್ಬಾರ್** 21

» **ಡಾಕ್ಟರ್ ಪ್ಲಸ್**

**ಸುರಕ್ಷಿತ ಮಾತೃತ್ವಕ್ಕೆ ಗರ್ಭಿಣಿಯರಿಗೂ ಕೋವಿಡ್ ಲಸಿಕೆ** 23

» **ಕೋಲ್ಮಿಂಚಿನ ಸಮರಕಲಿ, ಸ್ವಾತಂತ್ರ್ಯದ ನೇತಾಜಿ** 25

» **ನಮ್ಮೂರ ಪ್ರವಾಸಿತಾಣ**

- ಕನ್ನಡ ನಾಡಿನ ಮೊದಲ ರಾಜಧಾನಿ ಬನವಾಸಿ 27

» **ಪತ್ರಿಕೆಯಲ್ಲಿ ಕಂಡಂತೆ** 29

# ನೆನಪಿನಂಗಳ

## ಅಂದು ಗಾಡಿ ಹೆಬ್ಬಾರ, ದಾಡಿ ಹೆಬ್ಬಾರ, ಎಪಿಎಮ್ಸಿ ಹೆಬ್ಬಾರ, ಶಾಸಕ ಹೆಬ್ಬಾರ, ಇಂದು ಮಂತ್ರಿ ಹೆಬ್ಬಾರ!



ಯಲ್ಲಾಪುರ ವಿಧಾನ ಸಭಾ ಕ್ಷೇತ್ರದಿಂದ ಅರಬೈಲ ಶಿವರಾಮ ಹೆಬ್ಬಾರ ಪ್ರಚಂಡ ಬಹುಮತದಿಂದ ಗೆದ್ದು ಮೂರನೇ ಸಲ ವಿಧಾನ ಸಭೆಯನ್ನು ಪ್ರವೇಶ ಮಾಡಿ ಸಚಿವರಾಗಿದ್ದಾರೆ. ಅಂದು ಕ್ಷೇತ್ರದ ಎಲ್ಲಾ ಕಡೆ ಹಿಂದೆಂದೂ ಕಾಣದಂತಹ ರಾಜಕೀಯ ವಿಜಯೋತ್ಸವಕ್ಕೆ ಕ್ಷೇತ್ರ ಸಾಕ್ಷಿಯಾಗಿತ್ತು. ಹೆಬ್ಬಾರರ ಈ ಪ್ರಸ್ತುತ ರಾಜಕೀಯ ನಡೆ ಜಿಲ್ಲೆಯಲ್ಲಿಯೇ ಅತಿ ಮಹತ್ವದ ಹಾಗೂ ಗುರುತರ ಹೆಜ್ಜೆಯಾಗಿ ಮಾರ್ಪಟ್ಟಿದೆಯಲ್ಲದೇ ಜಿಲ್ಲೆ ಈ ಮೊದಲು ಕಾಣದ ವಿಶಿಷ್ಠ ಉಸ್ತುವಾರಿ ಸಚಿವರಾಗಿ ಗುರುತಿಸಿ ಕೊಂಡದ್ದು ಸುಲಭದ ಮಾತಲ್ಲ! ಪ್ರಸ್ತುತ ಮುಖ್ಯ ಮಂತ್ರಿಗಳ ತವರು ಜಿಲ್ಲೆ ಹಾವೇರಿಯ ಉಸ್ತುವಾರಿ ಸಚಿವರಾಗಿದ್ದು ರಾಜಕೀಯ ವಿಶ್ಲೇಷಣೆಯ ಲೆಕ್ಕಾಚಾರದ ಪ್ರಕಾರ ಒಂದು ಲೈಟ್ ಪ್ರಮೋಷನ್ನ್ ಎಂದೇ ಹೇಳ ಬೇಕು!



ನಾಲ್ಕು ದಶಕಗಳಿಂದ ಒಬ್ಬ ಸ್ನೇಹಿತನಾಗಿ, ಹತ್ತಿರದ ವ್ಯಕ್ತಿಯಾಗಿ ಹೆಬ್ಬಾರರನ್ನು ಬಲ್ಲ ನನಗೆ ಅವರ ರಾಜಕೀಯ ಹೆಜ್ಜೆ ಗುರುತಿನ ಹಿಂದೆ ಸಿಹಿ ಕಹಿ ರಾಜಕೀಯದ ಅನುಭವದ ಮೆಟ್ಟಿಲುಗಳು ಇವೆ. ಅವರ ನೇರನುಡಿ, ಅಂಜದ ಅಳುಕಿಲ್ಲದ ಧಾಡಸಿತನ, ಅಭಿವೃದ್ಧಿಯಬಗ್ಗೆ ಇರುವ ಪ್ರಾಮಾಣಿಕ ಕಳಕಳಿ ಅವರನ್ನು ಸಮರ್ಥ ಸಚಿವರನ್ನಾಗಿ ತಂದು ನಿಲ್ಲಿಸಿದೆ. ‘ಬಡತನವನ್ನು ಅನುಭವದಿಂದ ಅರಿಯಬೇಕೇ ಹೊರತು ಓದಿನಿಂದಲ್ಲ’ ಎನ್ನುವ ಅವರ ಮಾತು ಅನುಭವದ ಎರಕ ಎಂದೇ ಅರಿಯ ಬೇಕು. 1979 ರಿಂದ ಸಕ್ರೀಯ ರಾಜಕೀಯದಲ್ಲಿ ತಮ್ಮನ್ನು ತೊಡಗಿಸಿ ಕೊಂಡ ಅವರು ಸ್ವಂತ ಲಾರಿ ಓಡಿಸುವಾಗ ಗಾಡಿ ಹೆಬ್ಬಾರ ಎಂದು ಜನಗುರುತಿಸಿ ಕರೆದರೆ, ಸಮಾಜದಲ್ಲಿ ಗುರುತಿಸಿ ಕೊಂಡು ದಾಡಿ ಬಿಟ್ಟಾಗ ದಾಡಿ ಹೆಬ್ಬಾರ ಎಂದೆ ಜನ ನಾಮಕರಣ ಮಾಡಿದರು. ತಮ್ಮ ಗಂಡೆದೆಯಿಂದಲೆ ಎಪಿಎಂಸಿ ಅಧ್ಯಕ್ಷರಾಗಿ ಆ ಸಂಸ್ಥೆಯ ಅಭಿವೃದ್ಧಿಯಲ್ಲಿ ಒಂದು ಇತಿಹಾಸ ನಿರ್ಮಿಸಿ ಸಂಸ್ಥೆಯನ್ನು ಬೆಳಸುವದರ ಜೊತೆಗೆ ತಾನು ರಾಜಕೀಯವಾಗಿ ಬೆಳದು ಎಪಿಎಂಸಿ ಹೆಬ್ಬಾರರಾದರು. ಜನತಾ ಪಕ್ಷ, ಜನತಾ ದಳ, ಬಿಜೆಪಿ, ಕಾಂಗ್ರೆಸ್ ಪಕ್ಷಗಳಲ್ಲಿ ಗುರುತಿಸಿ ಕೊಂಡು ಶಾಸಕರಾಗಿ ಶಾಸಕ ಹೆಬ್ಬಾರರಾದರು. ಈಗವರು ಮಂತ್ರಿ ಹೆಬ್ಬಾರ! ಒಂದು ರಾಜಕೀಯ ಲೆಕ್ಕಾಚಾರದ ಪ್ರಕಾರ ಹೆಬ್ಬಾರ ಅವರು ಸಂಪುಟ ದರ್ಜೆಯ ಸಚಿವರಾಗಿ ಉತ್ತರ ಕಾಣದ ಜಿಲ್ಲೆಗೆ ಉತ್ತರ ಹುಡುಕುವ, ಹುಡುಕಿ ಉತ್ತರ ನೀಡುವ ಜಿಲ್ಲಾ ಉಸ್ತುವಾರಿ ಸಚಿವರಾಗುವ ಕಾಲ ಕೂಡಿಬಂದದ್ದು ಜಲ್ಲೆಯ ರಾಜಕೀಯ ಭಾಗ್ಯ ಎಂದೇ ಹೇಳ ಬೇಕು.

ಒಂದು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಾಮಾನ್ಯ ಪ್ರಜೆಯೊಬ್ಬ ತನ್ನ ಕಾರ್ಯ ಕ್ಷಮತೆಯಿಂದ ಅಸಮಾನ್ಯ ಹುದ್ದೆಗೇರ ಬಹುದೆಂಬುದಕ್ಕೆ ಸಚಿವ ಶಿವರಾಮ ಹೆಬ್ಬಾರರು ನಿದರ್ಶನವಾಗಿದ್ದಾರೆ. ಇದು ನೈಜ ಪ್ರಜಾಪ್ರಭುತ್ವದ ಆಶಯವು ಕೂಡ!

**– ಬೀರಣ್ಣ ನಾಯಕ ಮೊಗಟಾ.**

## ಅಭಿವೃದ್ಧಿಯ ಮಹಾ ಪರ್ವ



# ಹೈಟೆಕ್ ಬಸ್ ನಿಲ್ದಾಣ

ಮುಂಡಗೋಡ: ಪಟ್ಟಣದಲ್ಲಿ ಹೈಟೆಕ್ ಬಸ್ ನಿಲ್ದಾಣ ಲೋಕಾರ್ಪಣೆಗೆ ಸಜ್ಜಾಗಿದೆ. ಹಲವು ವರ್ಷಗಳಿಂದ ಸಾರ್ವಜನಿಕರು ಕಂಡ ಬಸ್ ನಿಲ್ದಾಣದ ಕನಸು ಈಡೇರಿಸುವ ಕೆಲಸವನ್ನು ಸಚಿವ ಶಿವರಾಮ ಹೆಬ್ಬಾರ ಅವರು ಮಾಡಿರುವುದು ತಾಲೂಕಿನ ಜನತೆಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪಟ್ಟಣದ ಬಸ್ ನಿಲ್ದಾಣಕ್ಕೆ ನಾಲ್ಕು ಕೋಟಿ ರೂಪಾಯಿ ಮಂಜೂರಿಯಾಗಿದ್ದು ಕಾಮಗಾರಿ ಆರಂಭಿಸಿದ ನಂತರ ಇಕ್ಕಟ್ಟಾದ ಜಾಗದಲ್ಲಿ ಕಟ್ಟ ಬಾರದು ಎಂಬ ಸಾರ್ವಜನಿಕರ ಆಶಯಂತೆ ಕಟ್ಟಡ ಬೃಹತ ಆಕಾರವಾಗಿ ಕಟ್ಟಬೇಕು ಎಂದು ಸಚಿವರು ಯೋಚಿಸಿ ಕಟ್ಟಡ ಕಾಮಗಾರಿ ಸ್ವಲ್ಪ ವಿಳಂಬವಾದರು ನೋಡುಗರ ಮನ ಸೆಳೆಯುವಂತೆ ಬಸ್ ನಿಲ್ದಾಣ ತಯಾರಾಗಿದೆ. ರಾಜ್ಯದಲ್ಲಿ ಕೋವಿಡ್ ಪ್ರಭಾವ ಹೆಚ್ಚು ಪಸರಿಸಿದ್ದರಿಂದ ಕಾಮಗಾರಿಯಲ್ಲಿ ವಿಳಂಬವಾಗಿ ಕೆಲವು ದಿನಗಳು ಕಾಯಬೇಕಾಯಿತು. ಈಗ ಪೂರ್ಣಗೊಂಡ ಬಸ್ ನಿಲ್ದಾಣ ಉದ್ಘಾಟನೆಗೆ ಸಜ್ಜಾಗಿದೆ. ಹಳೇ ಬಸ್ ನಿಲ್ದಾಣದ ಪ್ರದೇಶ ಇಕ್ಕಟ್ಟಾಗಿರುವುದರಿಂದ ಜಿಲ್ಲಾ ಪಂಚಾಯತ ಇಲಾಖೆಯ ಕಟ್ಟಡವನ್ನು ಹಳೆಯ ತಹಶಿಲ್ದಾರ ಕಚೇರಿಗೆ ಸ್ಥಳಾಂತರಿಸಿ ದೊಡ್ಡ ಪ್ರಮಾಣದಲ್ಲಿ ಹಾಗೂ ಜಿಲ್ಲೆಯಲ್ಲೆ ಮಾದರಿಯಾದ ಬಸ್ ನಿಲ್ದಾಣ ಕಟ್ಟಲಾಗಿದೆ.

ಹಲವಾರು ವರ್ಷಗಳ ಕಾಲ ಜನತೆಗೆ ಉತ್ತಮ ಸೇವೆ ನೀಡಿದ್ದ ಬಸ್ ನಿಲ್ದಾಣ ಇದಾಗಿದ್ದರೂ ಇದುವರೆಗೆ ಯಾರೊಬ್ಬರೂ ಬಸ್ ನಿಲ್ದಾಣದ ನಿರ್ಮಾಣದ ಕೆಲಸಕ್ಕೆ ಕೈ ಹಾಕಿರಲಿಲ್ಲ ಆದರೆ ಈಗ ಅತ್ಯಂತ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣಗೊಂಡಿದೆ ಎನ್ನುತ್ತಾರೆ ಇಲ್ಲಿನ ಸ್ಥಳೀಯರು.

ಬಸ್ ನಿಲ್ದಾಣದಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲಾಗಿದ್ದು ಒಂದೇ ಬಾರಿಗೆ ಇಪ್ಪತ್ತಕ್ಕೂ ಹೆಚ್ಚು ಬಸ್‌ಗಳನ್ನು ನಿಲ್ಲಿಸುವಂತಹ ವ್ಯವಸ್ಥೆಯನ್ನು ಇಲ್ಲಿ ಕಾಣ ಬಹುದಾಗಿದೆ. ಬಸ ನಿಲ್ದಾಣದಲ್ಲಿ ಪ್ರತ್ಯೇಕವಾಗಿ ಮಹಿಳೆಯರ ವಿಶ್ರಾಂತಿ ಕೊಠಡಿ ಪುರುಷರ ವಿಶ್ರಾಂತಿ ಕೊಠಡಿ, ಚಿಕ್ಕ ಮಕ್ಕಳಿಗೆ ಹಾಲುಣಿಸಲು ಪ್ರತ್ಯೇಕ ಕೊಠಡಿಯನ್ನು ವ್ಯವಸ್ಥೆ ಮಾಡಲಾಗಿದೆ. ಟಿಕೆಟ್ ಕಾಯ್ದಿರಿಸುವ ಕೊಠಡಿ ನಿಯಂತ್ರಣ ಕೊಠಡಿ ಇಷ್ಟೆಲ್ಲಾ ಸೇರಿದಂತೆ ಒಟ್ಟೂ 10 ರಿಂದ 15 ಮಳಿಗೆಗಳಿವೆ. ಅಲ್ಲದೆ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಕ್ಯಾಂಟೀನ್ ವ್ಯವಸ್ಥೆ ಹಾಗೂ ವಿಶಾಲವಾದ ಹಾಲ್ ಕೂಡ ನಿರ್ಮಾಣ ಮಾಡಲಾಗಿದೆ.

# ಸೂರಿಲ್ಲದವರಿಗೆ ಒಂದು ಸೂರು




ಯಲ್ಲಾಪುರ ಮತ್ತು ಮುಂಡಗೋಡದ ಪ್ರತಿ ತಾಲೂಕಿನಲ್ಲಿ ಹತ್ತು ಎಕರೇ ಜಾಗದಲ್ಲಿ ಸಾವಿರಾರು ಭೂ ಹಾಗೂ ವಸತಿ ರಹಿತ ಕುಟುಂಬದವರಿಗೆ ವಸತಿ ಸಂಕೀರ್ಣ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಗ್ರಹಭಾಗ್ಯ ಯೋಜನೆಯಡಿಯಲ್ಲಿ ಯಲ್ಲಾಪುರದಲ್ಲಿ 579 ಸಂಕೀರ್ಣ ವ್ಯವಸ್ಥೆಯಲ್ಲಿ ಮನೆ ನಿರ್ಮಾಣ ಹಾಗೂ ಮುಂಡಗೋಡದಲ್ಲಿಯೂ ಸಂಕೀರ್ಣ ವ್ಯವಸ್ಥೆಯಲ್ಲಿ 750 ಮನೆ ನಿರ್ಮಾಣ ಮಾಡುವ ಯೋಜನೆ ಹೊಂದಲಾಗಿದೆ. ಯಲ್ಲಾಪುರದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಹತ್ತು ಎಕರೆಸ್ಥಳ ಹಾಗೂ ಮುಂಡಗೋಡದಲ್ಲಿ ಅರಣ್ಯ ಇಲಾಖೆಯ ಹತ್ತು ಎಕರೆ ಜಮೀನನ್ನು ವಸತಿ ಸಂಕೀರ್ಣಕ್ಕಾಗಿ ಬಳಸಿಕೊಳ್ಳಲಾಗಿದೆ. ಮುಂಡಗೋಡದ ಹತ್ತು ಎಕರೆ ಜಮೀನು ಪಡೆಯಲು ಸಚಿವ ಶಿವರಾಮ ಹೆಬ್ಬಾರ ಹರಸಾಹಸ ಪಟ್ಟಿದ್ದರು. ಅಂದಿನ ಮುಖ್ಯಮಂತ್ರಿ ಬಿ.ಎಸ್ ಯಡಿಯುರಪ್ಪ, ಅರಣ್ಯ ಸಚಿವರು ಕೃಷಿ ಸಚಿವರನ್ನು ಹತ್ತು ಹಲವಾರು ಬಾರಿ ಭೇಟಿಯಾಗಿ ಸುದೀರ್ಘವಾಗಿ ಚರ್ಚಿಸಿ ಕೊನೆಗೂ ಮಂಜೂರಾತಿಯನ್ನು ಪಡೆದುಕೊಂಡಿದ್ದಾರೆ. ಫಲಾನುಭವಿಗಳು ಸೇರಿದಂತೆ ಹೆಬ್ಬಾರ್ ಅಭಿಮಾನಿಗಳು ವಸತಿ ರಹಿತರಿಗೆ ವಸತಿ ಒದಗಿಸುವ ಶಿವರಾಮ್ ಹೆಬ್ಬಾರ್ ಅವರ ಪ್ರಯತ್ನವನ್ನು ಹಾಗೂ ಕಾಳಜಿಯನ್ನು ಮುಂದಿನ ತಲೆಮಾರಿಗೂ ನೆನಪಿನಲ್ಲಿರಬೇಕು, ಸಚಿವರ ಕಾಳಜಿಯನ್ನು ಗಮನಿಸಿ ಯಲ್ಲಾಪುರ ಹಾಗೂ ಮುಂಡಗೋಡ ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ ನೂತನ ವಸತಿ ಸಂಕೀರ್ಣಕ್ಕೆ ಹೆಬ್ಬಾರ್ ನಗರ ಎಂದು ಹೆಸರಿಡಲು ಒತ್ತಾಯ ಮಾಡಿದ್ದರು. ಜನರ ಇಚ್ಚೆಯಂತೆ ಇದೀಗ ಹೆಬ್ಬಾರ್ ನಗರವೆಂದೆ ನೊಂದಾವಣಿಯಾಗಿದೆ. ಸರ್ಕಾರ ಕೂಡ ಹೆಬ್ಬಾರ್ ನಗರವೆಂದು ವಸತಿ ಸಂಕೀರ್ಣ ಕ್ಷೇತ್ರವನ್ನು ಪರಿಗಣಿಸಿದೆ.

ಮೊದಲ ಬಾರಿಗೆ ಶಿವರಾಮ ಹೆಬ್ಬಾರ್ ಅವರು ಶಾಸಕರಾಗಿ ಆಯ್ಕೆಯಾದ ತಮ್ಮ ಕ್ಷೇತ್ರದಲ್ಲಿ ಯಾರೊಬ್ಬರೂ ಕೂಡ ವಸತಿ ರಹಿತರಾಗಿ ಇರಬಾರದು ಎಂಬ ಕನಸನ್ನು ಕಂಡಿದ್ದರು. ಈ ನಿಟ್ಟಿನಲ್ಲಿ ಕೆಲವು ವರ್ಷಗಳ ಹಿಂದಿನಿಂದಲೇ ಅವರು ಪ್ರಯತ್ನವನ್ನು ಮುಂದುವರಿಸಿದ್ದರು. ಈಗಾಗಲೇ ಭೂಮಿ ಇದ್ದ ಕ್ಷೇತ್ರದ ಸಾವಿರಾರು ಜನರಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದು ರೈತರಿಗಾಗಿ ಹೊಸ ಯೋಜನೆಯ ಮೂಲಕ ಮನೆಯನ್ನು ಒದಗಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಹೆಬ್ಬಾರರ ಇಂತಹ ಅಭಿವೃದ್ಧಿ ಕಾರ್ಯಗಳು ಮುಂದಿನ ಹಲವಾರು ತಲೆಮಾರುಗಳ ಕಾಲ ನೆನಪಿರುವಂತೆ ಮಾಡಿದೆ ಅಲ್ಲದೆ ಅವರ ಹೆಸರನ್ನು ಸ್ಥಿರಸ್ಥಾಯಿಯಾಗಿಡಲು ಸಹಕಾರಿಯಾಗಿದೆ.

# ಬನವಾಸಿ ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕೆ ಕಾರ್ಯಾದೇಶ:ಶೀಘ್ರವೇ ಕಾಮಗಾರಿಗೆ ಭೂಮಿಪೂಜೆ



ಬನವಾಸಿ ಸುಮಾರು 50 ಸಾವಿರ ಜನಸಂಖ್ಯೆಯನ್ನು ಹೊಂದಿರುವ ಅತಿದೊಡ್ಡ ಹೋಬಳಿ. ಕನ್ನಡದ ಮೊದಲ ರಾಜಧಾನಿಯಾಗಿರುವ ಈ ಭಾಗಕ್ಕೆ ದಶಕಗಳಿಂದ ವಿದ್ಯುತ್ ಸಮಸ್ಯೆ ಇತ್ತು. ವಿಶೇಷವಾಗಿ ರೈತರು ವಿದ್ಯುತ್ ಸಂಪರ್ಕದ ವ್ಯತ್ಯಯದಿಂದ ಸಮಸ್ಯೆ ಅನುಭವಿಸುತ್ತಿದ್ದರು. ಕೃಷಿ ಕಾರ್ಯಕ್ಕೆ ತೀವ್ರ ಅಡಚಣೆ ಉಂಟಾಗುತ್ತಿತ್ತು.

ಬನವಾಸಿ ಭಾಗದ ಜನರು ತಮ್ಮೂರಿಗೆ 30 ಕಿ.ಮೀ. ಅಂತರದ ಶಿರಸಿಯಿಂದ ಅಥವಾ ಎಸಳೆ ಗ್ರಾಮದ ವಿದ್ಯುತ್ ಉಪಕೇಂದ್ರದ ಮೂಲಕ ವಿದ್ಯುತ್ ಪಡೆಬೇಕಾಗಿತ್ತು. ಭತ್ತದ ಮಿಲ್, ಹಣ್ಣುಗಳ ಸಂಸ್ಕರಣಾ ಘಟಕ ಸೇರಿದಂತೆ ಹಲವು ಉದ್ದಿಮೆಗಳಿರುವ ಈ ಭಾಗದ ಉದ್ಯಮಿಗಳ ಪಾಡು ಕಷ್ಟವಾಗಿತ್ತು.

ಈ ಜ್ವಲಂತ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಒದಗಿಸಬೇಕು ಎಂಬ ದೃಢ ನಿರ್ಧಾರದೊಂದಿಗೆ ಶಿವರಾಮ ಹೆಬ್ಬಾರ್ ಅವರು ಶಾಸಕರಾದ ದಿನದಿಂದ ಬನವಾಸಿಯಲ್ಲಿ ಪ್ರತ್ಯೇಕ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಅವಿರತವಾಗಿ ಪ್ರಯತ್ನ ನಡೆಸುತ್ತಿದ್ದರು. 2012 ನೇ ಇಸವಿಯಿಂದ ನೆನೆಗುದಿಗೆ ಬಿದ್ದಿದ್ದ ಈ ಯೋಜನೆಗೆ ಪುನಃ ಕಾಯಕಲ್ಪ ನೀಡಿ ಸರಕಾರದ ಮಟ್ಟದಲ್ಲಿ ಎಲ್ಲಾ ಅಡೆತಡೆಗಳನ್ನು ನಿವಾರಿಸಿದರು. ಇದರ ಫಲವಾಗಿ ಬನವಾಸಿಯ ಕಡಕೋಡ ಗ್ರಾಮದಲ್ಲಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಮಂಜೂರಾತಿ ದೊರೆತಿದೆ.

ಕಡಗೋಡ ಗ್ರಾಮದಲ್ಲಿ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡುವುದಕ್ಕೆ ಕೇಂದ್ರ ಪರಿಸರ ಇಲಾಖೆಯಿಂದ ಅನುಮತಿ ಪಡೆಯುವ ಸಮಸ್ಯೆ ಎದುರಾಗಿತ್ತು. ಸಚಿವ ಶಿವರಾಮ ಹೆಬ್ಬಾರ್ ಅವರು ಕೇಂದ್ರ ಪರಿಸರ ಖಾತೆ ಸಚಿವರಾದ ಶ್ರೀ ಪ್ರಕಾಶ ಜಾವ್ಡೇಕರ್ ಅವರೊಂದಿಗೆ ದೂರವಾಣಿ ಹಾಗೂ ಪತ್ರದ ಮೂಲಕ ವ್ಯವಹರಿಸಿ ಅಂತಿಮವಾಗಿ ಕೇಂದ್ರ ಪರಿಸರ ಇಲಾಖೆ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡುವುದಕ್ಕೆ ಅನುಮತಿ ನೀಡಿದೆ.

ಈ ಭಾಗದ ರೈತರು ಸಮರ್ಪಕವಾದ ವಿದ್ಯುತ್ ಲಭಿಸದೆ ತಮ್ಮ ಕೃಷಿ ಚಟುವಟಿಕೆಗಳಿಗೆ ನೀರು ಹಾಯಿಸುವುದಕ್ಕೆ ಸಾಧ್ಯವಾಗದ ಅಸಹಾಯಕ ಪರಿಸ್ಥಿತಿಯನ್ನು ಶಿವರಾಮ ಹೆಬ್ಬಾರ್ ಅವರು ಕಣ್ಣಾರೆ ಕಂಡು ಅನ್ನದಾತ ಸುಭಿಕ್ಷನಾದರೆ ದೇಶ ಸುಭಿಕ್ಷವಾದಂತೆ ಎಂಬ ಧ್ಯೇಯ ವಾಕ್ಯದೊಂದಿಗೆ ಈ ವಿದ್ಯುತ್ ಉಪ ಕೇಂದ್ರದ ನಿರ್ಮಾಣ ಸಂಕಲ್ಪವನ್ನು ಕೈಗೊಂಡಿದ್ದರು. ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರಿಗೆ ಬನವಾಸಿ ಭಾಗದ ರೈತರ ಸಮಸ್ಯೆಯನ್ನು ತಿಳಿಸಿ ಕಡಗೋಡದಲ್ಲಿ 110/ 100 ಕೆ.ವಿ ಸಾಮರ್ಥ್ಯದ ವಿದ್ಯುತ್ ಉಪಕೇಂದ್ರವನ್ನು ಪುನಃ ಮಂಜೂರಿ ಮಾಡಿಸುವುದರೊಂದಿಗೆ ನುಡಿದಂತೆ ನಡೆದಿದ್ದಾರೆ.

ಸಚಿವರಾದ ಶಿವರಾಮ ಹೆಬ್ಬಾರ್ ಅವರ ಜನಪರ ಕಾಳಜಿಯಿಂದ ನೆನೆಗುದಿಗೆ ಬಿದ್ದಿದ್ದ ವಿದ್ಯುತ್ ಉಪಕೇಂದ್ರ ನಿರ್ಮಾಣ ಯೋಜನೆಗೆ ಕಳೆದ ತಿಂಗಳು 7 ಕೋಟಿ 51 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಕಾಮಗಾರಿಗೆ ಸರಕಾರ ಕಾರ್ಯಾದೇಶವನ್ನು ಹೊರಡಿಸಿದೆ. ಮುಂದಿನ ಕೆಲವು ದಿನಗಳಲ್ಲಿ ಇಂಧನ ಸಚಿವರಾದ ಶ್ರೀ ಸುನೀಲ್ ಕುಮಾರ್ ಅವರ ಜೊತೆಗೂಡಿ ಶಾಸಕರು ಗ್ರೀಡ್ ನಿರ್ಮಾಣ ಕಾಮಗಾರಿ ಶಂಕುಸ್ಥಾಪನೆಯನ್ನು ನೆರವೇರಿಸಲಿದ್ದಾರೆ.

## ನೂತನ ವಿದ್ಯುತ್ ಉಪಕೇಂದ್ರದ ಸ್ಥಾಪನೆಯಿಂದಾಗುವ ಅನೂಕೂಲಗಳು.

- ಈ ಭಾಗದ ಸಾರ್ವಜನಿಕರ ವಿದ್ಯುತ್ ಸಮಸ್ಯೆಗೆ ಶಾಶ್ವತ ಪರಿಹಾರ ಲಭಿಸಲಿದೆ.
- ಭತ್ತದ ಮಿಲ್ ಹಾಗೂ ಹಣ್ಣು ಸಂಸ್ಕರಣಾ ಘಟಕಗಳಿಗೆ ಮತ್ತು ಸಣ್ಣ ಉದ್ಯಮಗಳಿಗೆ ಸಮರ್ಪಕವಾದ ವಿದ್ಯುತ್ ಲಭಿಸಲಿದೆ.
- ಕರೆಗಳಿಗೆ ನೀರು ತುಂಬಿಸುವ ಮಹತ್ವಾಕಾಂಕ್ಷೆಯ ಯೋಜನೆಗೆ ಅನೂಕೂಲವಾಗಲಿದೆ.
- ರೈತರಿಗೆ ತಮ್ಮ ಕೃಷಿಗೆ ಸಂಭಂಧಿಸಿದ ಯಂತ್ರೋಪಕರಣಗಳನ್ನು ಬಳಸುವುದಕ್ಕೆ ಸಮರ್ಪಕವಾದ ವಿದ್ಯುತ ಲಭಿಸಲಿದೆ.







# ಕೋಟ್ಯಾಂತರ ಹಣದ ಅನುದಾನ, ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ

ಯಲ್ಲಾಪುರ : ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಸುರಿದ ಭಾರೀ ಮಳೆಯಿಂದಾಗಿ ಜಿಲ್ಲೆ ಎಂದೂ ಕಂಡರಿಯದ ಭಾರೀ ಪ್ರಮಾಣದ ಪ್ರವಾಹ ಕಾಣುವಂತಾಯಿತು. ಈ ಸಂದರ್ಭದಲ್ಲಿ ತಾಲೂಕಿನ ಬಹುತೇಕ ಭಾಗಗಳಲ್ಲಿ ಹಾನಿಯ ಪ್ರಮಾಣವೂ ಹೆಚ್ಚಿತ್ತು. ಕಳೆಚೆ ಗ್ರಾಮವಂತೂ ಅಕ್ಷರಶಃ ನಲುಗಿ ಹೋಗಿತ್ತು. ಅದೇ ಸಂದರ್ಭದಲ್ಲಿ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿಯವರು ಪ್ರಮಾಣವಚನ ಸ್ವೀಕರಿಸಿದ್ದರು. ಅಧಿಕಾರ ಸ್ವೀಕರಿಸಿದ ಕೆಲವೇ ಘಂಟೆಗಳಲ್ಲಿ ಜಿಲ್ಲೆಯಲ್ಲಿ ಮಳೆಯಿಂದಾದ ಹಾನಿ ಪ್ರದೇಶಗಳಿಗೆ ಮುಖ್ಯಮಂತ್ರಿಗಳನ್ನು ಕರೆತಂದು ವಾಸ್ತವದ ಪರಿಚಯ ಮಾಡಿಸಿ ಸ್ಥಳದಲ್ಲೇ ಪ್ರವಾಹ ಪರಿಹಾರ ನಿಧಿಯಿಂದ 200ಕ್ಕೂ ಅಧಿಕ ಕೋಟಿ ಜಿಲ್ಲೆಗೆ ನೀಡುವುದಾಗಿ ಘೋಷಿಸಿದರು. ಅದರಂತೆ ಕಾಮಗಾರಿಗಳು ಕೈಗೆತ್ತಿಕೊಂಡಿದ್ದು ಕೆಲವು ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಹೇಳಿದರು.



ಅವರು ತಾಲೂಕಿನ ಮಲವಳ್ಳಿಯ ಮಾವಿನಮನೆ ಸೇವಾ ಸಹಕಾರಿ ಸಂಘದ ಸಭಾಭವನದಲ್ಲಿ ವಜ್ರಳ್ಳಿ, ಮಾವಿನಮನೆ ಗ್ರಾಮ ಪಂಚಾಯತಗಳ ವ್ಯಾಪ್ತಿಯಲ್ಲಿ ಪ್ರವಾಹ ಪರಿಹಾರದ ಮೊತ್ತದಲ್ಲಿ 3.40ಕೋಟಿ ರೂ ವೆಚ್ಚದಲ್ಲಿ ಕೈಗೊಳ್ಳುತ್ತಿರುವ ವಿವಿಧ ಕಾಮಗಾರಿಗಳ ಭೂಮಿಪೂಜೆ ಹಾಗೂ 3ಕೋಟಿಗೂ ಅಧಿಕ ಮೊತ್ತದಲ್ಲಿ ಪೂರ್ಣಗೊಂಡ ಕಾಮಗಾರಿಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ನಮ್ಮ ಸರ್ಕಾರ ವಿದ್ಯುತ್ ಸಂಬಂಧಿತ ಕಾಮಗಾರಿಗಳಿಗಾಗಿ ಭಾರಿ ಮೊತ್ತದ ಅನುದಾನವನ್ನು ನೀಡಿದ್ದು ಎಲ್ಲ ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅರಣ್ಯ ಅತಿಕ್ರಮಣದಾರ ರೈತರು ಹೊಂದಿರುವ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಚಿಂತನೆ ನಡೆದಿದೆ. ರಾಜ್ಯದಲ್ಲಿ ಕೋವಿಡ್ ಮಹಾಮಾರಿಯ ಹೊಡೆತಕ್ಕೆ ಅಭಿವೃದ್ಧಿ ಕಾರ್ಯದ ವೇಗಕ್ಕೆ ತುಸು ಹಿನ್ನಡೆಯಾಗಿದ್ದರೂ ಯಾವುದೇ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸದೇ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ಸಾಗುತ್ತಿವೆ. ರಾಜ್ಯದ ಬಡವರಿಗಾಗಿ ಹೆಸ್ಕಾಂ "ಬೆಳಕು" ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ಪ್ರತಿ ಮನೆಗೂ ಬೆಳಕು ನೀಡುವ ಉದ್ದೇಶ ಸರ್ಕಾರದ್ದಾಗಿದ್ದು ಫಲಾನುಭವಿಗಳು ಸಂಪೂರ್ಣ ಉಪಯೋಗ ಪಡೆದುಕೊಳ್ಳಬೇಕೆಂದರು. ಒಟ್ಟಿನಲ್ಲಿ ಸರ್ಕಾರದಿಂದ ಪರಿಹಾರ ರೂಪದಲ್ಲೋ, ಅನುದಾನದ ರೂಪದಲ್ಲೋ ಹಣ ಮಂಜೂರು









ಮಾಡಿಸಿ ಅಭಿವೃದ್ಧಿ ಕಾರ್ಯಗಳನ್ನು ತರುವುದು ನನ್ನ ಜವಾಬ್ದಾರಿಯಾದರೂ ಕೈಗೊಳ್ಳುವ ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ಕಾಯ್ದುಕೊಳ್ಳುವುದು ಪ್ರಜೆಗಳಾದ ನಿಮ್ಮ ಜವಾಬ್ದಾರಿಯಾಗಿದೆ. ತಾಲೂಕಿನ ಅಭಿವೃದ್ಧಿ ಕಾರ್ಯಗಳಿಗೆ ಇನ್ನೂ ಹೆಚ್ಚಿನ ಅನುದಾನದ ನಿರೀಕ್ಷೆಯಲ್ಲಿರುವ ನಾವು ವಜ್ರಳ್ಳಿ ಮತ್ತು ಮಾವಿನಮನೆ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸುಬ್ಬಣ್ಣ ಬೋಳ್ಮನೆ ಮಾತನಾಡಿ, ಸಚಿವ ಹೆಬ್ಬಾರರ ನಿರಂತರ ಪರಿಶ್ರಮದಿಂದ ನಮ್ಮ ಪ್ರದೇಶಕ್ಕೆ ಸಾಕಷ್ಟು ಅನುದಾನ ದೊರೆತಿದ್ದು ಹಿಂದೆಂದೂ ಕಾಣದಷ್ಟು ಅಭಿವೃದ್ಧಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು

ವಾಗಳ್ಳಿಯಲ್ಲಿ 10ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಲಾದ ಎಪಿಎಂಸಿ ಗೋದಾಮನ್ನು ಇದೇ ಸಂದರ್ಭದಲ್ಲಿ ಸೇ.ಸ. ಸಂಘಕ್ಕೆ ಹಸ್ತಾಂತರಿಸಲಾಯಿತು. ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಪ್ರದೇಶಕ್ಕೆ ನೀಡಿದ ಸಚಿವರನ್ನು, ಇಡಗುಂದಿ, ತೇಲಂಗಾರ, ಬೀಗಾರ, ವಜ್ರಳ್ಳಿ, ಮಲವಳ್ಳಿ, ವಾಗಳ್ಳಿ ಇನ್ನಿತರ ಸ್ಥಳಗಳಲ್ಲಿ ವಿವಿಧ ಕಾಮಗಾರಿಗಳ ಭೂಮಿಪೂಜೆ ಹಾಗೂ ಪೂರ್ಣಗೊಂಡ ಕಾಮಗಾರಿಗಳ ಉದ್ಘಾಟನೆ ನೆರವೇರಿಸಿದರು.

ಜನರಿಂದ ಆಯ್ಕೆಯಾದ ಜನಪ್ರತಿನಿಧಿಯಾಗಿ ಹೇಗೆಲ್ಲಾ ಜನರ ಸೇವೆ ಮಾಡಬಹುದೆಂಬುದಕ್ಕೆ ಶಿವರಾಮ ಹೆಬ್ಬಾರ್ ಅವರು ಜ್ವಲಂತ ನಿದರ್ಶನರಾಗಿದ್ದಾರೆ. ಹಾಗೆಯೇ ಒಬ್ಬ ಜನಪ್ರತಿನಿಧಿ ತಾನು ಮಾಡುವ ಅಭಿವೃದ್ಧಿ ಪರವಾದ ಜನಸೇವೆಯ ಕಾರ್ಯಕ್ಕೆ ಕೃತಜ್ಞತೆಯನ್ನು ಹೇಗೆ ಸಲ್ಲಿಸಬಹುದೆಂಬುದಕ್ಕೆ ಯಲ್ಲಾಪುರ ತಾಲೂಕಿನ ವಜ್ರಳ್ಳಿ ಮತ್ತು ಮಾವಿನ ಮನೆ ಗ್ರಾ.ಪಂ ವ್ಯಾಪ್ತಿಯ ಸಾರ್ವಜನಿಕರೇ ನಿದರ್ಶನರಾಗಿದ್ದಾರೆ. ಅವರ ಸಂತಸಕ್ಕೆ ಪಾರವೇ ಇರಲಿಲ್ಲ. ಕೇಳಿದ್ದು ಹಿಡಿಯಷ್ಟಾದರೆ ಕೊಟ್ಟದ್ದು ಬೊಗಸೆಯಷ್ಟಾಗಿತ್ತು ಎಂಬಂತೆ ಅಭಿವೃದ್ಧಿ ಕಾಮಗಾರಿಗಳು ಈ ಭಾಗದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿವೆ.

# ನಮ್ಮೂರ ಸಾಧಕರು

## ಯುವ ಪ್ರಗತಿಪರ ಕೃಷಿಕ ಪ್ರಸಾದ



ಯಾವುದೇ ತರಹದ ಕೃಷಿಯನ್ನ ಆಸಕ್ತಿಯಿಂದ ಮಾಡಿದ್ರೆ ಉಪ ಬೆಳೆಯಿಂದಲೂ ಉತ್ತಮ ಆದಾಯ ಪಡೆಯಲು ಸಾಧ್ಯ. ಇಲ್ಲೋರ್ವ ಯುವ ರೈತ ಅಡಿಕೆ, ಕಾಳುಮೆಣಸು, ದಾಲ್ಚಿನ್ ಜೊತೆಗೆ ಅಪರೂಪದ ಹಣ್ಣುಗಳು, ತರಕಾರಿಗಳು, ಅಲಂಕಾರಿಕ ಸಸ್ಯಗಳನ್ನ ಸಂರಕ್ಷಣೆ ಮಾಡುವ ಮೂಲಕ ಗಮನ ಸೆಳೆಯುತ್ತಿದ್ದಾರೆ.

ಉತ್ತರಕನ್ನಡ ಜಿಲ್ಲೆಯ ಮಲೆನಾಡು ಭಾಗದಲ್ಲಿ ಹೆಚ್ಚಾಗಿ ಕೃಷಿಕರು ಅಡಿಕೆ, ಕಾಳು ಮೆಣಸು, ಬಾಳೆಗಳನ್ನ ಬೆಳೆಯುತ್ತಾರೆ. ಆದ್ರೆ ಯಲ್ಲಾಪುರ ತಾಲೂಕಿನ ಕಾನಕೊಡ್ಲಿನ ಯುವಕ ಕೃಷಿಕರೊಬ್ಬರು ಅಪರೂಪದ ಸಸ್ಯಗಳನ್ನ ಬೆಳೆಯೋ ಮೂಲಕ ತಳಿಗಳ ಸಂರಕ್ಷಣೆ ಮಾಡ್ತಿದ್ದಾರೆ. ಇವರು ಕಾನಕೊಡ್ಲಿನ ಪ್ರಸಾದ ರಾಮಾ ಹೆಗಡೆ ಈಗ ಎಲ್ಲರ ಕೃಷಿಕರ ಗಮನವನ್ನ ಕೇಂದ್ರಿಕರಿಸಿದ್ದಾರೆ. ಇವರು ಪ್ರಧಾನ ಬೆಳೆಯಾಗಿರುವ ಅಡಿಕೆ, ಕಾಳು ಮೆಣಸಿನ ಜೊತೆಗೆ ತುಸು ಆಸಕ್ತಿಯಿಂದ ಕೃಷಿ ಮಾಡಿ ಉಪ ಬೆಳೆಯಿಂದಲೂ ಉತ್ತಮ ಆದಾಯ ಪಡೆಯಲು ಸಾಧ್ಯವಿದೆ ಎಂಬುದನ್ನ ತೋರಿಸಿಕೊಟ್ಟಿದ್ದಾರೆ.

ಬಿಎ ಪದವಿ ಮುಗಿಸಿರುವ ಪ್ರಸಾದ ಹೆಗಡೆ 19 ವರ್ಷಗಳ ಹಿಂದೆ ಭತ್ತವನ್ನ ಬೆಳೆಯುತ್ತಿದ್ದರು. ಆದ್ರೆ ಹೆಚ್ಚಿನ ಆದಾಯವಿಲ್ಲ ಮತ್ತು ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಅವುಗಳನ್ನ ಕೈಬಿಟ್ಟರು. ಈ ಮೊದಲು ಪ್ರಸಾದ ಅವರ ಥಾಕುವಿನಲ್ಲಿ ಅಡಿಕೆ, ಕಾಳುಮೆಣಸು, ದಾಲ್ಚಿನ್, ಅಪ್ಪೆಮಿಡಿ ಮಾವು, ಔಷಧಿ ಸಸ್ಯಗಳು, ಕಾಡು ಹಣ್ಣುಗಳು, ಅಲಂಕಾರಿಕ ಸಸ್ಯಗಳು. ಗಡ್ಡೆ ಗೆಣಸುಗಳು ಇವೆ. ಪ್ರತಿ ವರ್ಷ ಬೇರೆ ರಾಜ್ಯ, ಬೇರೆ ಜಿಲ್ಲೆಗಳಿಗೆ ಹೋದಾಗ, ಅಲ್ಲದೆ ಪ್ರಗತಿಪರ ರೈತರ ಮನೆಯಿಂದ ಸಿಗುವ ಅಪರೂಪದ ಸಸ್ಯಗಳನ್ನ ತಂದು ತಮ್ಮ ತೋಟದಲ್ಲಿ ಸಂರಕ್ಷಿಸುತ್ತಿದ್ದಾರೆ. ಈಗಾಗಲೇ ಹಲವಾರು ತರಹದ ವಿದೇಶದ ಹಣ್ಣುಗಳು, ಅಳಿವಿನಂಚಿನ ಹಣ್ಣುಗಳು, ಕಾಡುಹಣ್ಣುಗಳು ತಂದು ಬೆಳೆಸಿದ್ದಾರೆ. ಇವರ ಕ್ಷೇತ್ರದಲ್ಲಿ 250 ಪ್ರಬೇಧದ 1100 ಗಿಡಗಳಿವೆ. 40 ಅಳಿವಿನಂಚಿನ ಮತ್ತು ಅಪರೂಪದ ಗಿಡಗಳಿವೆ.

ಆರಂಭದಲ್ಲಿ ಇವರ ವಾರ್ಷಿಕ ಆದಾಯ 20 ಸಾವಿರ ಇತ್ತು. ಇದೀಗ ಇವರು ಬೆಳೆಯುವ ಅಡಿಕೆ, ಕಾಳುಮೆಣಸು, ಅಪ್ಪೆಮಿಡಿ ಮಾವು, ಜೇನು ಸಾಕಾಣಿಕೆ ಯಿಂದಾಗಿ ಆದಾಯ 30 ಲಕ್ಷಕ್ಕೂ ಹೆಚ್ಚಿದೆ. ಆರ್ಥಿಕ ಸ್ಥಿತಿ ಕಡಿಮೆಯಿದ್ದಾಗ ಎಲ್ಲರಂತೆ ಪ್ರಗತಿಪರನಾಗಬೇಕು. ಏನಾದ್ರು ಸಾಧನೆ ಮಾಡಬೇಕೆಂಬ ಹಂಬಲ ಪ್ರಸಾದ ಅವರಲ್ಲಿತ್ತು. ಮಳೆಗಾಲದ ಮುನ್ನೆಚ್ಚರಿಕೆ ಏನೆಲ್ಲಾ ಕ್ರಮ ಕೈಗೊಳ್ಳಬೇಕೆಂದು ಪ್ರಾಕ್ಟಿಕಲ್ ಆಗಿ ತಿಳಿದುಕೊಂಡಿದ್ದಾರೆ.

ಒಂದು ಎಕರೆಗೆ 20 ರಿಂದ 21 ಕ್ವಿಂಟಲ್ ಒಣ ಅಡಿಕೆ ಬರುತ್ತಿದೆ. ಇದನ್ನ ಸಂಪೂರ್ಣ ಸಾವಯವ ಮತ್ತು ಝೀರೋ ಬಜೆಟಲ್ಲಿ ಮಾಡಿದ್ದೇನೆ ಅಂತಾರೆ ಪ್ರಸಾದ. ಕಳೆದ ವರ್ಷ ಕೇಂದ್ರ ಸರ್ಕಾರ ಬಾಗಲಕೋಟೆ ವಿಜ್ಞಾನಿಗಳು ಬಂದು ಮಾಹಿತಿ ಪಡೆದಿದ್ದರು. ಇವರ ಡೈವರ್ಸಿಟಿಯಲ್ಲಿ ಕನಿಷ್ಠ 1100 ಜಾತಿಯ ಗಿಡಗಳಿವೆ. ಸ್ಥಾನಿಕ ಹಣ್ಣು, ಕಾಡು ಹಣ್ಣುಗಳು ಮತ್ತು ಔಷಧಿ ಸಸ್ಯಗಳಿವೆ.

ಇವರ ಜಮೀನಿನಲ್ಲಿ 45 ತಳಿಯ ಅತಿ ಅಪರೂಪದ ಅಪ್ಪೆ ಮಾವು ತಳಿಗಳಿವೆ. ಸುಬ್ಬಪ್ಪ ತಳಿ, ಶಿವಮೊಗ್ಗದಿಂದ ದಾಂಡೇಲಿ ವ್ಯಾಪ್ತಿಯವರೆಗೆ ಇರುವ ಅಪರೂಪದ ಸಾಸಿವೆ ಮಾವು, ಕಡಿಗಾಯಿ ಮಾವು ಇದೆ. ಇದರ ಜೊತೆಗೆ ಭಾರತದ ಅಳಿವಿನಂಚಿನ ತಳಿ ಮತ್ತು ವಿದೇಶಿಯ ತಳಿಗಳಿವೆ. ವಿದೇಶದ ಮಾಫರಂಗ, ಹ್ಯಾಂಡಿ ಫೈನಾಪಲ್, ಮೆಕ್ಸಿಕಲ್ ಫೈನಾಫಲ್, ಚೆರ್ರಿ ಹಣ್ಣು, ಬ್ಲಾಕ್ ಸಪೋಟಾ, ಮೇಮಾ ಸಪೋಟಾ ಸೇರಿ 150 ವಿದೇಶಿ ಹಣ್ಣಗಳ ವೈವಿಧ್ಯತೆ ಇದೆ.

ಕಾಕಿ ಹಣ್ಣು, ಅಮಟೆಯಲ್ಲಿ ಸಿಹಿ ಅಮಟೆ, ಆಲ್ ಸೀಜನ್ ಅಮಟೆ, ಸಾದಾ ಅಮಟೆ, ಬಿಳಿ ಚಿತ್ರಮೂಲ, ಕೆಂಪು ಚಿತ್ರಮೂಲ, ನೀಲಿ ಚಿತ್ರಮೂಲ, ಬಾಳೆಹಣ್ಣಿನಲ್ಲಿ 30 ಜಾತಿಯದ್ದಿವೆ. ರಸಬಾಳೆಯಲ್ಲಿ ವಿವಿಧ ತರಹದ ಬಾಳೆಗಳಿವೆ. ಉದ್ದ ರಸಬಾಳೆ, ಗಿಡ್ಡ ಬಾಳೆ, ಸಹಸ್ರ ಬಾಳೆ, ಪೂಪಲ ಬಾಳೆ, ಲೋಕಲ್ ತಳಿಗಳಿಗಳಾದ ಮೈಸೂರು ಮಿಟಕಾ, ಶಾನಬಾಳೆ, ಭೂದ ಶಾನಬಾಳೆ, ಭೂದಚಂದ್ರ ಬಾಳೆ ಸೇರಿ 20ಕ್ಕೂ ಹೆಚ್ಚು ತಳಿಗಳಿನ್ನ ಇವರು ಸಂರಕ್ಷಿಸಿದ್ದಾರೆ.

ಇವರ ತೋಟಗಳ ರಾಜ್ಯವಲ್ಲದೇ ಹೊರ ರಾಜ್ಯಗಳಿಂದ ಸಂಶೋಧಕರು, ವಿದ್ಯಾರ್ಥಿಗಳು ಆಗಮಿಸ್ತಾರೆ. ವಿಶ್ವವಿದ್ಯಾಲಯದ ಸಂಶೋಧನೆ ಸಲುವಾಗಿ ಆಗಾಗ ವಿದ್ಯಾರ್ಥಿಗಳು ಆಗಮಿಸಿ ಪ್ರಸಾದ ಹೆಗಡೆ ಅವರಿಂದ




ಮಾಹಿತಿ ಪಡೆದುಕೊಳ್ತಾರೆ. ಹಲವು ಜನರು ಪಿಎಚ್ಡಿ ಮಾಡಿ ಹೋಗಿದ್ದಾರೆ.

ಪ್ರಸಾದ ಹೆಗಡೆ ಅವರ ಅಪರೂಪದ ಸಸ್ಯಗಳ ವೈವಿಧ್ಯತೆ ಕಂಡು ನಾಡಿನ ವಿವಿಧೆಡೆಯಿಂದ ಪ್ರಶಸ್ತಿಗಳು ಹುಡುಕಿ ಬಂದಿವೆ. 2021 ರಲ್ಲಿ ಐವಿಇಆರ್, ಇನೋವೆಟಿವ್ ಫಾರ್ಮರ್ ಪ್ರಶಸ್ತಿ, 2018ರಲ್ಲಿ ಪಿಪಿಎಫ್ಆರ್ ತಳಿ ಸಂರಕ್ಷಣೆಗೋಸ್ಕರ ಪ್ರಶಸ್ತಿ. ಮಾವು ತಳಿ ಸಂರಕ್ಷಕ ಐಎಚ್ ಆರ್ ಹೊರ ತಂದ ಪುಸ್ತಕದಲ್ಲಿ ಇವರ ಹೆಸರು ಬಿಡುಗಡೆಯಾಗಿದೆ.

ಕರ್ನಾಟಕ ಸರ್ಕಾರದಿಂದ ಕೃಷಿ ಪಂಡಿತ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಜೀವ ವೈವಿಧ್ಯ ಮಂಡಳಿಯಿಂದ ಪಾರಂಪರಿಕ ಪರಿಸರ ರಕ್ಷಣೆ ರೈತ. ಬೆಂಗಳೂರು ವಿವಿಯಿಂದ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ, ಧಾರವಾಡ ಕೃಷಿ ವಿವಿಯಿಂದ ಶ್ರೇಷ್ಠ ಕೃಷಿಕ ಪ್ರಶಸ್ತಿಗಳು ಇವರ ಮುಡಿಗೇರಿದೆ. ದತ್ತಿನಿಧಿ ಬಹುಮಾನ ಸೇರಿ ಹತ್ತಾರು ಪ್ರಶಸ್ತಿಗಳು ಇವರನ್ನ ಹುಡುಕಿ ಬಂದಿವೆ.

ಒಂದು ಎಕರೆಯಲ್ಲಿ ನಾಲ್ಕು ಜಾತಿಯ ದಾಲ್ಚಿನಿ ಸಸ್ಯಗಳಿವೆ. ಇವುಗಳ ಚಕ್ಕೆ ಹಾಗೂ ಮೊಗ್ಗಿಗೆ ಹೆಚ್ಚು ಬೇಡಿಕೆಯಿದೆ. ಸಾಂಬಾರು ಬೆಳೆಗಳ ಧಾರಣೆ ಕಡಿಮೆಯಾಗಿದ್ದರೂ, ಲಾಭಕ್ಕೆ ಕೊರತೆಯಿಲ್ಲ. 90 ಜಾತಿ ಔಷಧ ಸಸ್ಯಗಳಿವೆ' ಎಂದ ಅವರು, ಬರ್, ಬೋರೆಹಣ್ಣು, ಜತ್ರೋಪಾ, ವಾಟರ್ ಫ್ರುಟ್, ಎಗ್ ಫ್ರುಟ್, ದೂಪ, ರುದ್ರಾಕ್ಷಿ, ಸಿಲ್ವರ್ ಓಕ್, ಚಿಕ್ಕು, ಭಾರತದ ಇಂಗು, ಫ್ಯಾಷನ್ ಫ್ರುಟ್, ಬಿಳಿ ನೇರಲು, ರಾಜನೆಲ್ಲಿ, ಕಪ್ಪು ಲಕ್ಕಿ, ಶ್ರೀಗಂಧ, ಮೆಹಂದಿ, ಬಿಳಿಸೂಜಿ ಮೆಣಸು ಹೀಗೆ ಅಲ್ಲಿರುವ ಗಿಡಗಳ ಬಗ್ಗೆ ಪರಿಚಯಿಸುತ್ತ ಹೋಗ್ತಾರೆ. ಇವರು.

ತೋಟದ ಅಂಚಿನಲ್ಲಿರುವ ಜಲಮೂಲದಲ್ಲಿ ಚಿಕ್ಕ ಚಿಕ್ಕ ಇಂಗುಗುಂಡಿಯನ್ನ ಮಾಡಿದ್ದಾರೆ. ಕೃಷಿಯ ಜೊತೆಗೆ ಜಲಸಂರಕ್ಷಣೆ ಮೂಡ ಇಲ್ಲಿ ಆಗುತ್ತಿದೆ. ಚಿಕ್ಕ ಕೆರೆಯಲ್ಲಿ ಮೀನು ಕೃಷಿ ಮಾಡುತ್ತಿದ್ದಾರೆ. ತೋಟದ ಅಂಚಿನ ಲ್ಲಿರುವಇಂಗುಗುಂಡಿಗಳು ನೀರಿನ ವರತೆಯನ್ನು ಚೆನ್ನಾಗಿಟ್ಟಿವೆ. ಎರೆಹುಳು ಗೊಬ್ಬರ, ಕಾಂಪೋಸ್ಟ್, ಜೈವಿಕ ಗೊಬ್ಬರಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಸಾವಯವ ಕೃಷಿಗೆ ಒತ್ತು ನೀಡುವ ಅವರಿಗೆ ರಾಸಾಯನಿಕದ ಬಗ್ಗೆ ಮಡಿವಂತಿಕೆಯೇನಿಲ್ಲ. 'ಅಗತ್ಯವಾದಾಗ ಕೆಲವೊಮ್ಮೆ ರಾಸಾಯನಿಕ ಬಳಸ್ತಾರೆ. ಸ್ವ ಪರಿಶ್ರಮ, ಯಂತ್ರೋಪಕರಣಗಳ ಸದ್ಬಳಕೆಯೇ ಪ್ರಸಾದರ ಕೃಷಿಯ ಯಶಸ್ಸಿನ ಮೂಲವಾಗಿದೆ. ವೀಡ್ ಕಟರ್, ಸ್ಪ್ರೇಯರ್, ಚಾಲಿ ಅಡಿಕೆ ಬಿಡಿಸುವ, ಅಗತೆ ಕೊಚ್ಚುವ, ಕಾಳುಮೆಣಸು ಸ್ವಚ್ಛಗೊಳಿಸುವ ಯಂತ್ರ ಹೀಗೆ ಹಲವಾರು ಆಧುನಿಕ ಯಂತ್ರಗಳನ್ನು, ಕೃಷಿಯಿಂದ ಬಂದಿರುವ ಆದಾಯದಲ್ಲಿ ಖರೀದಿಸಿದ್ದಾರೆ.ಇವರ ತೋಟ ನೋಡಲು ವರ್ಷಕ್ಕೆ ಏನಿಲ್ಲ ಅಂದ್ರು ಸುಮಾರು 1200 ಜನರು, 50ಕ್ಕೂ ಹೆಚ್ಚು ವಿಜ್ಞಾನಿಗಳು ಬರ್ತಾರೆ. ಮನೆಯ ಪಕ್ಕದಲ್ಲಿಯೇ ಅಜೋಲಾ, ಎರೆ ಹುಳು ಗೊಬ್ಬರ ತೊಟ್ಟಿ ಮಾಡಿದ್ದಾರೆ. ಏಳೆಂಟು ಹಸುಗಳಿರುವ ಕಾರಣಕ್ಕೆ ಕೊಟ್ಟಿಗೆ ಗೊಬ್ಬರ ಅಲ್ಲಿಯೇ ತಯಾರಾಗುತ್ತವೆ.

ಕೃಷಿ ಕಾರ್ಮಿಕರ ಸಮಸ್ಯೆಯಿಂದ ಬೇಸಾಯ ಕಷ್ಟವಾಗುತ್ತಿದೆ. ಹೀಗಾಗಿ ಕೂಲಿ ಆಳುಗಳ ಸಮಸ್ಯೆಗೆ ನಾನಾ ಬಗೆಯ ಯಂತ್ರಗಳ ಬಳಕೆ ಮೂಲಕ ಪರಿಹಾರ ಕಂಡುಕೊಂಡಿದ್ದಾರೆ. ಅಡಿಕೆ ಸುಲಿಯುವ ಯಂತ್ರ, ಅಗೆತ ಕೊಚ್ಚುವ ಯಂತ್ರ, ಕಾಳು ಮೆಣಸು ಬಿಡಿಸುವ ಯಂತ್ರ, ಭತ್ತ ತೂರುವ ಯಂತ್ರ, ಕಳೆ ಕತ್ತರಿಸುವ ಯಂತ್ರ, ಜೇನು ತುಪ್ಪ ತೆಗೆಯುವ ಯಂತ್ರ, ಮೇವು ಕತ್ತರಿಸುವ ಯಂತ್ರಗಳನ್ನು ಬಳಕೆ ಮಾಡುತ್ತಾರೆ.

ಬದನೆ ಹಣ್ಣು, ಯಲವರ್ಗ್ಗಿ, ಚಿತ್ರಮೂಲ, ಬಿಳಿ ಕೆಂಪು,ನೀಲಿ, ರಕ್ತ ಶುದ್ದಿ ಸಸ್ಯ.ಗಳು, ಲಕ್ಕಿ ಜಾತಿಯ ವಿವಿಧ ಬಣ್ಣಗಳ ಸಸ್ಯಗಳಿವೆ.

ಅಮೃತಬಳ್ಳಿ, ಬಲಗಣೆ, ವಾಯು ಉಳಂಗ, ಚಕ್ರಾಣಿ, ಬಜೆಬೇರು, ಕಾಲಮೇಗಾ, ಸಂದುಬಳ್ಳಿ, ಚಕ್ರಮನಿ, ವಾತಂಗಿ , ಮುಕುತಬೇವ, ಸುಳಿಹೂವು ಹೀಗೆ ಅಪರೂಪದ ಸಸ್ಯಗಳು. ಕಾಣಿಸುತ್ತವೆ. ಅಲಂಕಾರಿಕ ಪೇರಲ. ಬಿಳಿ ಪೇರಲ, ಲೋಕಲ್ ಕೆಂಪು, ಹೈಬ್ರೀಡ್ ಕೆಂಪು, ಬಿಟ್ರೋಟ್ ಪೇರಲ, ಬಲೂನ್ ಗುವಾ, ಲಕ್ನೋ 49 ಹೀಗೆ ತಳಿಗಳಿವೆ.

ಅಗರವುಡ್ ನೂರು ಮರಗಳಿವೆ. ಅಡಿಕೆಯನ್ನ ಕುಬ್ಜ ಅಡಿಕೆ ಸಸ್ಯವಿದೆ. ಕುಬ್ಜವಾಗಿ ಕಾಣುವ ಈ ಗಿಡಗಳು ಅಡಿಕೆ ನೀಡುತ್ತಿವೆ. ಇನ್ನೂ ರಾಮ ಅಡಿಕೆ., ಪಾಂಡವರ ಅಡಿಕೆ.. ವೆರಿಗೆಟೆಡ್ ಅಡಿಕೆ, ಸಿಂಗಾಪುರ ಅಡಿಕೆ ಗಮನ ಸೆಳೆಯುತ್ತವೆ. ಒಟ್ಟು 15 ಜಾಯಿ ಕಾಯಿ. ಗಿಡಗಳಿವೆ. ದೊಡ್ಡ ಮತ್ತು ಸಣ್ಣ ಗಾತ್ರದ ಗಿಡಗಳಿವೆ. ಕ್ಯಾನ್ಸರಗೆ ಔಷಧವಾಗಿರುವ ಸಿಮಾರೂಬಾ, ಸಿರಿತರಲು ಸಸ್ಯವಿದೆ. ಬಿಳಿದಾಸಾಳ, ನಾಚಿಕೆ ಮುಳ್ಳು, ಮಹಿಳೆಯರಿಗೆ ಔಷಧಿಗೆ ಯೋಗ್ಯವಾಗಿದೆ.

ಕಾರೆ ಬೇರು ಹಣ್ಣಿನ್ನ ಕಣ್ಣು ಕಪ್ಪಾದರೇ ಬಳಸ್ತಾರೆ. ಲೋಳೆಸರ ಸೇರಿ ಅಪರೂಪದ ಸಸ್ಯಗಳು ಪ್ರಸಾದ ಅವರ ಜಮೀನಲ್ಲಿ ಬೆಳೆದುನಿಂತಿವೆ. ಒಟ್ಟಿನಲ್ಲಿ ಸಾವಿರಾರು ಬಗೆಯ ಗಿಡಗಳನ್ನ ಹೊಂದಿರುವ ಪ್ರಸಾದ ಹೆಗಡೆ ಅಪರೂಪದ ಕೃಷಿಕರಲ್ಲಿ ಒಬ್ಬರಾಗಿದ್ದಾರೆ.




# ಅದ್ಭುತ ಪ್ರತಿಭೆ ಅಬ್ದುಲ್ ಮಥೀನ್

ಯಲ್ಲಾಪುರ : ಪಟ್ಟಣದ 12ವರ್ಷದ ಅಬ್ದುಲ್ ಮಥೀನ್ ಎಂಬ ಬಾಲಕ ತನ್ನ ಅದ್ಭುತ ಪ್ರತಿಭೆಯಿಂದ ಎಲ್ಲರನ್ನೂ ಅಚ್ಚರಿಗೊಳಿಸುತ್ತಿದ್ದಾನೆ. ಜನ್ಮದಿನಾಂಕ ಹೇಳಿದರೆ ಅರೆ ಕ್ಷಣದಲ್ಲಿ ಅದು ವಾರದ ಯಾವ ದಿನವಾಗಿತ್ತು ಎಂಬುದನ್ನು ಹೇಳುವ ಈ ಬಾಲಕನ ತಲೆಯಲ್ಲಿ 400ವರ್ಷಗಳ ಕ್ಯಾಲೆಂಡರ್ ಮಾಹಿತಿ ಇದೆ ಎನ್ನಬಹುದಾಗಿದೆ. ಇದೊಂದೇ ಅಲ್ಲದೇ ಇಂಗ್ಲೀಷ್ ಪದಗಳಲ್ಲಿರುವ ಅಕ್ಷರಗಳನ್ನು ಉಲ್ಟಾ ಹೇಳುವ ಸ್ಪರ್ಧೆಯಲ್ಲಿ ಗಿನ್ನಿಸ್ ದಾಖಲೆ ಸೃಷ್ಟಿಸುವ ಹಂತದಲ್ಲಿದ್ದಾನೆ.

ಪಟ್ಟಣದ ಕಾಳಮ್ಮನಗರದ ಸಲೀಂ ಶೇಖ ಹಾಗೂ ಮಮ್ತಾಜ್ ಬೇಗಂ ದಂಪತಿಗಳ ಎರಡನೇ ಪುತ್ರನಾಗಿರುವ ಅಬ್ದುಲ್ ಪಟ್ಟಣದ ಮದರ್ ಥೆರೆಸಾ ಶಾಲೆಯ ವಿದ್ಯಾರ್ಥಿಯಾಗಿದ್ದಾನೆ. ಯೋಗಿ ಟಾಪರ್ಸ್ ಪಾಯಿಂಟ್‌ನ ಯೋಗೇಶ್ ಶಾನಭಾಗರವರಲ್ಲಿ ತರಬೇತಿ ಪಡೆಯುತ್ತಿದ್ದು ಆಂಗ್ಲ ಪದಗಳ ಉಲ್ಟಾ ಸ್ಪೆಲ್ಲಿಂಗ್ ಹೇಳುವ ಜಾಗತಿಕ ಮಟ್ಟದ ಸ್ಪರ್ಧೆಯಲ್ಲಿ ವಿಶ್ವದಾಖಲೆ ನಿರ್ಮಿಸುವ ತವಕದಲ್ಲಿದ್ದಾನೆ.

ಈಗಾಗಲೇ ನೇಪಾಳದ ಬಾಲಕನೋರ್ವ ಒಂದು ನಿಮಿಷದಲ್ಲಿ 36 ಪದಗಳ ಉಲ್ಟಾ ಸ್ಪೆಲ್ಲಿಂಗ್ ಹೇಳಿ ವಿಶ್ವ ದಾಖಲೆ ಸ್ಥಾಪಿಸಿದ್ದು ಅಬ್ದುಲ್ ಮಥೀನ್ ಒಂದು ನಿಮಿಷದಲ್ಲಿ 39 ಪದಗಳ ಉಲ್ಟಾ ಸ್ಪೆಲ್ಲಿಂಗ್ ಹೇಳುವ ಮೂಲಕ ಹೊಸ ದಾಖಲೆ ಸೃಷ್ಟಿಸ ಹೊರಟಿದ್ದಾನೆ. ಕನ್ನಡ, ಇಂಗ್ಲೀಷ್, ಹಿಂದಿ, ಕೊಂಕಣಿ ಹಾಗೂ ಉರ್ದು ಭಾಷೆಗಳನ್ನು ಬಲ್ಲ ಈ ಬಾಲಕ 50ರ ವರೆಗಿನ ಮಗ್ಗಿಯನ್ನು ಲೀಲಾಜಾಲವಾಗಿ ಹೇಳಬಲ್ಲ. ಅಬ್ದುಲ್ ಮಥೀನನ ವಿಶೇಷ ಪ್ರತಿಭೆಗೆ ಪ್ರೋತ್ಸಾಹ ನೀಡಿ ಜಾಗತಿಕವಾಗಿ ಮನ್ನಣೆ ಸಿಗುವಂತಾಗಬೇಕಿದೆ.

# ಮಿಂಚಿನ ಓಟದ ಪ್ರತಿಭೆ ಎನ್.ಎಸ್. ಸಿಮಿ




ಮುಂಡಗೋಡ: ತಾಲೂಕಿನ ಪುಟ್ಟ ಗ್ರಾಮದಲ್ಲಿ ಹುಟ್ಟಿದ ಯುವತಿಯೊಬ್ಬಳು ಅಥ್ಲೆಟಿಕ್ಸ್‌ನಲ್ಲಿ ರಾಷ್ಟ್ರಮಟ್ಟದಲ್ಲಿ ಮಿಂಚಿ ತಾಲೂಕಿನ ಕೀರ್ತಿ ಹೆಚ್ಚಿಸುತ್ತಿದ್ದಾಳೆ.

ಹೌದು, ಇದು ಮುಂಡಗೋಡ ತಾಲೂಕಿನ ಚವಡಳ್ಳಿ ಗ್ರಾಪಂ ವ್ಯಾಪ್ತಿಯ ಲಕ್ಕೊಳ್ಳಿ ಗ್ರಾಮದ ಎನ್.ಎಸ್. ಸಿಮಿ ಅವರು ರಾಷ್ಟ್ರಮಟ್ಟದಲ್ಲಿ ಮಿಂಚುತ್ತಿದ್ದಾಳೆ.

ಚವಡಳ್ಳಿ ಗ್ರಾ.ಪಂ ವ್ಯಾಪ್ತಿಯ ಲಕ್ಕೊಳ್ಳಿ ಗ್ರಾಮದ ಎನ್.ವಿ.ಸಾಮ್ಯುವೆಲ್ ಮತ್ತು ಸುಜಾ ದಂಪತಿಯ ಪುತ್ರಿಯಾಗಿದ್ದಾಳೆ. ಮೊದಲಿಗೆ ಇಲ್ಲಿನ ಲೊಯೋಲ ಶಾಲೆಯಲ್ಲಿ ಮೂರನೇ ತರಗತಿಯಿಂದ 7ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ಆರನೇ ತರಗತಿಯಲ್ಲಿದ್ದಾಗ ಜಿಲ್ಲಾ ಮಟ್ಟದಲ್ಲಿ 100ಮೀ, 200ಮೀ, 400ಮೀ, ಮತ್ತು ರಿಲೇ ಓಟಗಳ ಸ್ಪರ್ಧೆಗಳಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದರು. ಬಾಲ್ಯದಿಂದಲೂ ಅಥ್ಲೆಟಿಕ್ಸ್‌ನಲ್ಲಿ ತುಂಬಾ ಆಸಕ್ತಿ ಹೊಂದಿದ ಸಿಮಿ ಅವರ ತಂದೆ ಧೈರ್ಯ ತುಂಬಿದರು. ತಂದೆ ಎನ್.ವಿ.ಸಾಮ್ಯುವೆಲ್ ಕ್ರೀಡಾಪಟುವಾಗಿದ್ದರು ಅವರು ಪಟ್ಟಣದ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 5ನೇ ತರಗತಿಯಿಂದ 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಈ ಅವಧಿಯಲ್ಲಿ ಕಬ್ಬಡಿಯಲ್ಲಿ ಎರಡು ಬಾರಿ ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾಗಿ ಆಟವಾಡಿದ್ದಾರೆ.

7ನೇ ತರಗತಿಯಲ್ಲಿದ್ದಾಗ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಸಿಮಿ ಬಳಿ ಶೂ ಇರಲಿಲ್ಲ. ಬರಿಗಾಲಲ್ಲೇ ಓಡಿದ್ದರು. ನಂತರ, ಮೂಡಬಿದ್ರೆ ಆಳ್ವಾಸ್ ಸ್ಪೋರ್ಟ್ಸ್ ಸ್ಕೂಲ್ ಸೇರಿದಾಗ 8ನೇ ತರಗತಿಯಲ್ಲಿ ಶೂ ನೀಡಲಾಯಿತು. 8 ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಮೂಡಬಿದ್ರೆ ಆಳ್ವಾಸ್ ಕಾಲೇಜನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಅಥ್ಲೆಟಿಕ್ಸ್‌ನಲ್ಲಿ ರಾಜ್ಯ ಮಟ್ಟದ ಚಾಂಪಿಯನ್ ಆದರು. ನಂತರ ಕೇರಳಾದ

ಪಾಲ್ ಸ್ಪೋರ್ಟ್ಸ್ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದು ಮೂಡಬಿದ್ರೆ ಆಳ್ವಾಸ್ ಕಾಲೇಜನಲ್ಲಿ ನಡೆದ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಸಿಮಿಯವರು 11 ಸೆಕೆಂಡ್ 56 ಪಾಯಿಂಟ್‌ನಲ್ಲಿ ಓಡಿ 28 ವರ್ಷದ ಹಿಂದೆ ಇದ್ದ 11 ಸೆಕೆಂಡ 60 ಪಾಯಿಂಟ್‌ನಲ್ಲಿ ಓಡಿದ ದಾಖಲೆಯನ್ನು ಮುರಿದಿದ್ದರು.

2021ರ ಸೆ.15 ರಂದು ತೆಲಂಗಾಣದಲ್ಲಿ ನಡೆದ ನ್ಯಾಷನಲ್ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಬೆಂಗಳೂರಿನ ಮೆಜೆಸ್ಟಿಕ್ ರೈಲ್ವೇಸ್ ಪರವಾಗಿ ಸಿಮಿ ಅವರು ಭಾಗಿಯಾಗಿ 100 ಮೀಟರ್ ಓಟದ ಸ್ಫರ್ಧೆಯಲ್ಲಿ ತೃತೀಯ ಸ್ಥಾನ ಮತ್ತು ರಿಲೇಯಲ್ಲಿ ಭಾಗಿಯಾಗಿ ಪ್ರಥಮ ಸ್ಥಾನ ಪಡೆಯುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿ ರಾಜ್ಯ ಜಿಲ್ಲೆಯ ಮತ್ತು ತಾಲೂಕಿನ ಕೀರ್ತಿ ಪತಾಕೆ ಹಾರಿಸಿದ್ದಾರೆ. ಈಗಾಗಲೇ ತಾಲೂಕಿನ ವಿವಿಧ ಸಂಘ ಸಂಸ್ಥೆಯವರು ಸಿಮಿಯವರ ಸಾಧನೆಯನ್ನು ಗುರುತಿಸಿ ಸನ್ಮಾಸಿ ಪ್ರೋತ್ಸಾಹ ನೀಡುತ್ತಿದ್ದಾರೆ.



ಎನ್.ವಿ.ಸಾಮ್ಯುವೆಲ್ ಸಿಮಿ ತಂದೆ: ನಾನು ಒಬ್ಬ ಮಾಜಿ ಕ್ರೀಡಾಪಟು. ನನಗೆ ಮೂವರು ಹೆಣ್ಣು ಮಕ್ಕಳು. ನಾನು, ನಮ್ಮ ಹೆಣ್ಣು ಮಕ್ಕಳು ಸ್ಪೋರ್ಟ್ಸ್‌ಲ್ಲಿ ಏನು ಮಾಡುತ್ತಾರೆ ಎಂದು ತಿಳಿದಿದ್ದೆ. ಬಾಲ್ಯದಲ್ಲಿ ಒಂದು ಬಾರಿ ತಾಲೂಕು ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ನಾನು ಆಯ್ಕೆಯಾಗಿದ್ದೇನೆ ಎಂದು ಸಿಮಿ ಕರೆದಳು. ಅಂದರಂತೆ ನಾನು ಹೋಗಿ ನೋಡಿದಾಗ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಅವಳ ಓಟವನ್ನು ನೋಡಿ ಮುಂದೊಂದು ದಿನ ನನ್ನ ಮಗಳು ಏನಾದರೂ ಸಾಧನೆ ಮಾಡುತ್ತಾಳೆ ಎಂದು ತಿಳಿದೆ. ಅಂದಿನಿಂದ ಇಂದಿನವರೆಗೆ ಅವಳಿಗೆ ಬೆನ್ನಲುಬಾಗಿ ನಿಂತು ಪ್ರೋತ್ಸಾಹ ನೀಡುತ್ತಿದ್ದೇನೆ. ಬಡತನದ ಪರಿಸ್ಥಿತಿಯಲ್ಲೂ ಕಷ್ಟಪಟ್ಟು ಚಿಕ್ಕ ಹಿಡುವಳಿದಾರನಾಗಿ ಕೃಷಿ ಕೂಲಿ ಮಾಡಿ ಸಿಮಿಯ ಆಸೆಗೆ ನೀರೆರೆಯುತ್ತಾ ಬಂದಿದ್ದೇನೆ. ಅವಳು ಗುರಿ ತಲುಪುವವರೆಗೂ ನಾನು ಪ್ರೋತ್ಸಾಹ ನೀಡುತ್ತೇನೆ.

ಎನ್.ಎಸ್. ಸಿಮಿ ಅಥ್ಲೆಟಿಕ್ಸ್ ಕ್ರೀಡಾಪಟು : ಮುಂದಿನ ವರ್ಷ ಏಷ್ಯನ್ ಗೇಮ್ಸ್ ಕಾಮನ್ ವೆಲ್ತ್ ಕೂಟ ಇದೆ. ನಾನು ಆಯ್ಕೆಯಾಗಿದ್ದು ಹೆಚ್ಚಿನ ತರಬೇತಿಗಾಗಿ ಪಂಜಾಬ್‌ಗೆ ತೆರಳತ್ತಿದ್ದೇನೆ. ಈಗಿ ಮಾಡಿರುವ ಸಾಧನೆ ಏನೂ ಅಲ್ಲ. ಅಂತಾರಾಷ್ಟ್ರದಲ್ಲಿ ಸಾಧನೆ ಮಾಡಬೇಕಿದೆ. ಅವಳು, ಹುಡಗಿ ಸ್ಪೋರ್ಟ್ಸ್ ನಲ್ಲಿ ಏನು ಮಾಡುತ್ತಾಳೆ ಅವಳನ್ನು ಓದಿಸಿ ಮದುವೆ ಮಾಡಿಸು ಎಂದು ಅನೇಕರು ನಮ್ಮ ತಂದೆ ಮತ್ತು ಪ್ಯಾಮಿಲಿ ಮುಂದೆ ಹೇಳುತ್ತಿದ್ದರು. ಸ್ಪೋರ್ಟ್ಸ್ ಅಂದರೆ ಕೆಲ ಜನರು ಕೀಳಾಗಿ ನೋಡುತ್ತಾರೆ. ಆದರೆ ನನ್ನ ತಂದೆ ಬಾಲ್ಯದಿಂದಲೂ ನನಗೆ ಫುಲ್ ಸಪೋರ್ಟ್ ಮಾಡಿ ಈ ಹಂತಕ್ಕೆ ತಂದಿದ್ದಾರೆ.

ಬಾಕ್ಸ್ ಸುದ್ದಿ, ಸಿಮಿಯವರು ನಾಲ್ಕು ಬಾರಿ ಕರ್ನಾಟಕ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಅಥ್ಲೆಟಿಕ್ಸ್‌ಲ್ಲಿ ಅವರು ಒಟ್ಟು 61 ಬಂಗಾರ, 25 ಬೆಳ್ಳಿ ಹಾಗೂ 15 ಕಂಚಿನ ಪದಕಗಳು ದೊರೆತಿವೆ. ಇವರ ಸಾಧನೆಯನ್ನು ಗುರುತಿಸಿ 2019ರಲ್ಲಿ ಟ್ಯಾಲೆಂಟ್ ಕೋಟಾದಲ್ಲಿ ಬೆಂಗಳೂರಿನ ಮೆಜೆಸ್ಟಿಕ್ ರೈಲು ನಿಲ್ದಾಣದಲ್ಲಿ ಕ್ಲರ್ಕ್ ಹುದ್ದೆಯನ್ನು ನೀಡಿದ್ದಾರೆ.

# ಗರ್ಭಿಣಿ ಮಹಿಳೆಯರ ಆಪತ್ಬಾಂದವರಾದ ಆಂಬುಲೆನ್ಸ್ ಸಿಬ್ಬಂದಿಗಳು.





ಮುಂಡಗೋಡ: ಮಹಿಳೆಯರಿಗೆ ಜೀವನದಲ್ಲಿ ಹೆರಿಗೆ ಸಮಯವು ಒಂದು ಅತ್ಯಂತ ಪ್ರಮುಖ ಹಂತವಾಗಿದ್ದು ಈ ವೇಳೆ ಅವರು ಅನುಭವಿಸುವ ನೋವು ಅಪಾರ. ಇತ್ತೀಚೆಗೆ ಮುಂದುವರಿದ ತಂತ್ರಜ್ಞಾನದಿಂದ ಆಸ್ಪತ್ರೆಗಳಲ್ಲಿ ವೈದ್ಯರು ಸಲೀಸಾಗಿ ಹೆರಿಗೆಗಳನ್ನು ಮಾಡಿಸುತ್ತಿದ್ದಾರೆ. ಆದರೆ ತಾಲೂಕಿನ ಹಳ್ಳಿಗಾಡಿನ ಮಹಿಳೆಯರು ಸರ್ಕಾರಿ ಆಸ್ಪತ್ರೆಗಳನ್ನು ಅವಲಂಬಿಸಿ ಹೆರಿಗೆಗೆಂದು ಆಸ್ಪತ್ರೆಗೆ ಬರುತ್ತಿರುವ ಮಾರ್ಗ ಮಧ್ಯೆ 108 ಆಂಬುಲೆನ್ಸ್‌ನಲ್ಲಿ ಹೆರಿಗೆಯಾಗುತ್ತಿರುವುದು ಸಾಮಾನ್ಯವಾಗಿದೆ!



ಎಚ್.ಎಫ್.ಇಂಗಳೆ,
ತಾಲೂಕು ಆಡಳಿತ ವೈದ್ಯಾಧಿಕಾರಿ.

2009 ಜುಲೈ ತಿಂಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕು ಆಸ್ಪತ್ರೆಯಲ್ಲಿ 108 ಆಂಬುಲೆನ್ಸ್ ಸೇವೆ ಆರಂಭವಾಯಿತು. 2020–21 ಸಾಲಿನಿಂದ ಈವರೆಗೂ ಆಂಬುಲೆನ್ಸ್‌ನಲ್ಲಿ 25 ಮಹಿಳೆಯರಿಗೆ ಹೆರಿಗೆಯಾಗಿವೆ. ಪ್ರತಿ ವರ್ಷ 30–35 ಹೆರಿಗೆಗಳು ಆಗುತ್ತಿವೆ. ತಾಯಿ ಮತ್ತು ಮಗುವಿಗೆ ತೊಂದರೆಯಾಗದ ರೀತಿಯಲ್ಲಿ ಕ್ಲಿಷ್ಟಕರ ಹೆರಿಗೆಗಳೂ ಆಗಿವೆ. ಆಂಬುಲೆನ್ಸ್‌ನಲ್ಲಿ ಇಬ್ಬರು ಚಾಲಕ ಮತ್ತು ಇಬ್ಬರು ತುರ್ತು ವೈದ್ಯಕೀಯ ತಂತ್ರಜ್ಞರು ಹಗಲು ಮತ್ತು ರಾತ್ರಿ ಪಾಳೆಯಾಗಿ ಕೆಲಸ ನಿರ್ವಹಿಸುತ್ತಾರೆ.

ಹೆರಿಗೆ ನೋವು ಬಂದ ತಕ್ಷಣ ಒಂದು ತಾಸು ಅಥವಾ ಎರಡು ತಾಸಿನಲ್ಲಿ ಹೆರಿಗೆಯಾಗುತ್ತವೆ. ಹಾಗಾಗಿ ಕೆಲವೊಮ್ಮೆ ಗರ್ಭಿಣಿಯರಿಗೆ ನೋವು ಕಾಣಿಸಿಕೊಂಡಿರುವುದಿಲ್ಲ. ಆಗ ಗರ್ಭಿಣಿಯ ಸ್ಥಿತಿ ನೋಡಿ ಬಹಳ ನೋವು ಕಾಣಿಸಿಕೊಂಡಾಗ ರಸ್ತೆ ಪಕ್ಕದಲ್ಲಿಯೇ ಆಂಬುಲೆನ್ಸ್ ನಿಲ್ಲಿಸಿ ಆಶಾ ಕಾರ್ಯಕರ್ತೆ, ಚಾಲಕ ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಸಹಾಯದಿಂದ ಅಥವಾ ಇವರ್ಯಾರು ಇಲ್ಲದಿದ್ದರೂ ತುರ್ತು ವೈದ್ಯಕೀಯ ತಂತ್ರಜ್ಞರು ಗರ್ಭಿಣಿಗೆ ಧೈರ್ಯ ತುಂಬಿ ಮೊದಲಿನ ಚಿಕಿತ್ಸೆಯ ವರದಿಗಳನ್ನೆಲ್ಲಾ ಪರಿಶೀಲಿಸಿ ಆಂಬುಲೆನ್ಸ್‌ನಲ್ಲಿಯೇ ಹೆರಿಗೆ ಮಾಡಿಸುತ್ತಾರೆ.

2011ರಿಂದ ನಾನು ತುರ್ತು ವೈದ್ಯಕೀಯ ತಂತ್ರಜ್ಞನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ತಾಲೂಕಿನ ಇಂದೂರ ಗ್ರಾಮದ ಗರ್ಭಿಣಿಯ



**ಧನರಾಜ ಸಿ.**
**ತುರ್ತು ವೈದ್ಯಕೀಯ ತಂತ್ರಜ್ಞ**

ಮಗುವಿನ ತಲೆ ಮೊದಲು ಬಾರದೆ ಕಾಲುಗಳು ಮೊದಲು ಬಂದ ಕಷ್ಟಕರವಾದ (ಬ್ರೀಚ್ ಪ್ರೆಸೆಂಟೇಶನ್), ಕಲಘಟಗಿ ತಾಲೂಕಿನ ಆಲದಕಟ್ಟಿ ಗ್ರಾಮದ ಎಚ್.ಐ.ವಿ. ಸೋಂಕಿತ ಗರ್ಭಿಣಿಯ ಹೆರಿಗೆಯನ್ನು ಪಿಪಿಇ ಕಿಟ್, ಗ್ಲೋಸ್ ಮತ್ತು ಮಾಸ್ಕ್ ಧರಿಸಿ ಮತ್ತು ರಕ್ತ ಕಡಿಮೆ ಇರುವ, ನೀರಿನ ಪ್ರಮಾಣ ಕಡಿಮೆ ಇರುವ, ಗರ್ಭಾವಸ್ಥೆಯಲ್ಲಿ ಸರಿಯಾದ ಚಿಕಿತ್ಸೆ ತೆಗೆದುಕೊಳ್ಳದೇ ಇರುವ, ಹೈಪಟಟಸ್ ಬಿ ಇರುವ ಹೆರಿಗೆಗಳನ್ನು ಕೂಡ ಮಾಡಿಸಿದ್ದೇನೆ. ಕೋವಿಡ್ ಮತ್ತು ಲಾಕಡೌನ ನಡುವೆಯೂ 108 ಆಂಬುಲೆನ್ಸ್ ವಾರಿಯರ್ಸ ಆಗಿ ನಿರ್ವಹಿಸಿದ್ದೇವೆ. ಅದರಲ್ಲಿಯೂ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಅತೀ ಹೆಚ್ಚು 108 ಆಂಬುಲೆನ್ಸ್‌ಲ್ಲಿಯೇ ಹೆರಿಗೆಯಾದ ತಾಲೂಕಾ ಮುಂಡಗೋಡ ಆಗಿದೆ. ನಾನೇ ಈ ಎಲ್ಲಾ ಸುರಕ್ಷಿತವಾಗಿ ಹೆರಿಗೆ ಮಾಡಿಸಿದ್ದೇನೆ ಇದಕ್ಕೆ ನಮ್ಮ ಸಿಬ್ಬಂದಿ, ಪೊಲೀಸ್ ಹಾಗೂ ಸಾರ್ವಜನಿಕರು ಸಹಕಾರ ನೀಡುತ್ತಾ ಬಂದಿದ್ದಾರೆ ಎಂದು ತುರ್ತು ವೈದ್ಯಕೀಯ ತಂತ್ರಜ್ಞ ಧನರಾಜ ಸಿ. ತಿಳಿಸಿದರು.

ಲಕ್ಷ್ಮೀ ಸುನೀಲ ಲಮಾಣಿ, ಅಗಡಿ ಗ್ರಾಮದ ಮಹಿಳೆ ಡಿ.13ರಂದು ಸಂಜೆ 5ಗಂಟೆಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಆಶಾ ಕಾರ್ಯಕರ್ತೆಯ ಬಳಿ ಹೋಗಿ ಆಂಬುಲೆನ್ಸ್‌ಗೆ ಕರೆ ಮಾಡಿದೆವು. ತಕ್ಷಣ ಬಂದ ಆಂಬುಲೆನ್ಸ್‌ನಲ್ಲಿ ನಾವು ಹೋಗುತ್ತಿದ್ದಾಗ ಮಾರ್ಗ ಮಧ್ಯೆ ಹೆರಿಗೆ ನೋವು ಅತಿಯಾಗಿ ತುರ್ತು ವೈದ್ಯಕೀಯ ತಂತ್ರಜ್ಞ, ಆಶಾ ಕಾರ್ಯಕರ್ತೆ ಮತ್ತು ಚಾಲಕ ಸುರಕ್ಷಿತ ಹೆರಿಗೆ ಮಾಡಿಸಿದರು.

ಎಚ್.ಎಫ್.ಇಂಗಳೆ, ತಾಲೂಕು ಆಡಳಿತ ವೈದ್ಯಾಧಿಕಾರಿ ಜನರಿಗೆ ಸರಿಯಾದ ವೇಳೆಗೆ ಆಸ್ಪತ್ರೆಗೆ ಹೋಗಬೇಕೆನ್ನುವ ತಿಳಿವಳಿಕೆ ಇಲ್ಲ. ತುಂಬಾ ತೊಂದರೆ ಉಂಟಾದಾಗ 108 ಆಂಬುಲೆನ್ಸ್‌ಗೆ ಕರೆ ಮಾಡುತ್ತಾರೆ. ಆಂಬುಲೆನ್ಸ್ ಹೆರಿಗೆ ಸತತವಾಗಿ ಆಗಬಾರದು. ಸಾಮಾನ್ಯವಾಗಿ ಗರ್ಭಿಣಿಯರು ಸುರಕ್ಷಿತ ಹೆರಿಗೆಗಾಗಿ ಅವಧಿಗಿಂತ 24ಗಂಟೆ ಮುಂಚೆ ಆಸ್ಪತ್ರೆಗೆ ಬಂದು ದಾಖಲಾಗಬೇಕು. ಆಶಾ ಕಾರ್ಯಕರ್ತೆಯರಿಗೆ ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ ಈ ಬಗ್ಗೆ ಜನರಿಗೆ ಮಾಹಿತಿ ನೀಡಲು ತಿಳಿಸಲಾಗುವುದು.



# ಶ್ರಮಿಕರಿಗಾಗಿ ರಾಜ್ಯದಲ್ಲಿ "ಶ್ರಮಿಕ್ ಸಂಜೀವಿನಿ" ಕಾರ್ಮಿಕ ಇಲಾಖೆಯಿಂದ ಮಹತ್ವಾಕಾಂಕ್ಷೆಯ ಯೋಜನೆ ಜಾರಿ









ಬೆಂಗಳೂರು: ಪ್ರತಿ ನಿತ್ಯ ತನ್ನ ಬದುಕಿನ ಭಾಗವಾಗಿ ಕೆಲಸದಲ್ಲಿ ತೊಡಗುವ ಕಾರ್ಮಿಕವರ್ಗ ಆರೋಗ್ಯದತ್ತ ಚಿತ್ತ ಹರಿಸದ ಪರಿಣಾಮ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದೆ. ಇದನ್ನು ಅರಿತ ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಈ ಸಮಸ್ಯೆಗೆ ಪರಿಹಾರವಾಗಿ 'ಶ್ರಮಿಕ್ ಸಂಜೀವಿನ' ಯೋಜನೆಯನ್ನು ರೂಪಿಸಿ ಜಾರಿಗೊಳಿಸಿದ್ದಾರೆ.

ಕಳೆದ ಸಾಲಿನ ಆಯವ್ಯಯದಲ್ಲಿ ಅನುಮೋದನೆ ನೀಡಿದಂತೆ ಕಟ್ಟಡ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಭಿತರ ಸ್ವಾಸ್ಥ್ಯಕ್ಕೆ ಒತ್ತು ನೀಡುವ ಶ್ರಮಿಕ್ ಸಂಜೀವಿನಿ ಜಾರಿಗೆ ಅಂತಿಮ ಹಂತದ ಸಿದ್ಧತೆಗಳುನ್ನು ನಡೆಸಿದ್ದು, ಇಲಾಖೆಯು ಮೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಯಾಗಿದೆ.

ಅತ್ಯಾಧುನಿಕ ಸಂಚಾರಿ ಕ್ಲಿನಿಕ್: ಶ್ರಮಿಕರು ಇರುವಕಡೆಗೆ ತೆರಳಿ ಅವರ ಆರೋಗ್ಯ ಪರೀಕ್ಷಿಸಿ ಅಗತ್ಯ ಸಲಹೆ ಸೂಚನೆ ನೀಡುವ ಮಹತ್ವಾಕಾಂಕ್ಷೆಯೊಂದಿಗೆ ಸಿದ್ಧಗೊಂಡಿರುವ ಈಸಂಚಾರಿ ಕ್ಲಿನಿಕ್‌ಗಳು ಅತ್ಯಾಧುನಿಕ ವ್ಯವಸ್ಥೆಗಳೊಂದಿಗೆ ಅಣಿಗೊಂಡಿರುವುದು ವಿಶೇಷ.

ಪ್ರತಿ ಸೋಮವಾರದಿಂದ ಶನಿವಾರದವರೆಗೆ ನಿಗಧಿತ ಅವಧಿಯಲ್ಲಿ ನಿಗಧಿತ ಪ್ರದೇಶಗಳಿಗೆ ಭೇಟಿ ನೀಡಿ ತಂಗಲಿರುವ ಈ ಸಂಚಾರಿ ಕ್ಲಿನಿಕ್ ಸೇವೆಯನ್ನು ಆರಂಭದಲ್ಲಿ ಬೆಳಗಾವಿ ವಿಭಾಗದ ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಮತ್ತು ಕಾರವಾರ ಜಿಲ್ಲೆಗಳಲ್ಲಿ ಜಾರಿಗೆ ಕಾರ್ಮಿಕ ಇಲಾಖೆ ಸಿದ್ಧತೆಗಳನ್ನು ನಡೆಸಿದೆ. ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಭಿತರಿಗೆ ಸಂಪೂರ್ಣ ಉಚಿತ ಆರೋಗ್ಯ ಸೇವೆಯನ್ನು ನೀಡಲಿದೆ.

ಪ್ರತಿ ಸಂಚಾರಿ ಕ್ಲಿನಿಕ್‌ಗಳು ಓರ್ವ ವೈದ್ಯ, ಓರ್ವ ನರ್ಸ್, ಓರ್ವ ಫಾರ್ಮಸಿಸ್ಟ್, ಓರ್ವ ಲ್ಯಾಬ್ ಟೆಕ್ನಿಷಿಯನ್, ಎಎನ್‌ಎಮ್, ಚಾಲಕ ಮತ್ತು ಸಹಾಯಕ ಸಿಬ್ಬಂದಿಯನ್ನು ಹೊಂದಿರಲಿದೆ.

**ಲಭ್ಯ ಸೇವೆಗಳು:** ಗುಣಮುಖ ಸೇವೆಗಳು, ಪ್ರಥಮ ಚಿಕಿತ್ಸಾ ಸೇವೆಗಳು, ಪ್ರಯೋಗಾಲಕ ಪರೀಕ್ಷಾ ಸೇವೆಗಳು, ಕೋವಿಡ್ ಪರೀಕ್ಷಾ ಸೇವೆಗಳು, ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮ ಸೇವೆಗಳು, ಅನುಸರಣಾ ಸೇವೆಗಳು, ಕುಟುಂಬ ಯೋಜನಾ ಸೇವೆಗಳು, ಪ್ರಸವ ಪೂರ್ವ ಮತ್ತು ನಂತರದ ಸೇವೆಗಳು, ಚುಚ್ಚು ಮದ್ದು ಸೇವೆಗಳು, ಸಮಾಲೋಚನಾ ಸೇವೆಗಳು, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು, ಆರೋಗ್ಯ ಶಿಕ್ಷಣ ಮತ್ತು ಪರಿಸರ ನೈರ್ಮಲ್ಯ ಸೇವೆಗಳು ಸೇರಿದಂತೆ ಇತರೆ ನಿರ್ದೇಶಿತ ಆರೋಗ್ಯ ಸೇವೆಗಳು ಸ್ಥಳದಲ್ಲಿಯೇ ದೊರಕಲಿವೆ.

**ಲಭ್ಯ ಸೌಲಭ್ಯಗಳು:** ಶ್ರಮಿಕ ವರ್ಗ ಮತ್ತು ಅವರ ಕುಟುಂಬ ವರ್ಗದ ಆರೋಗ್ಯ ಸೇವೆಗಾಗಿ ಜಾರಿ ಆಗಲಿರುವ ಈ ಮೊಬೈಲ್ ಕ್ಲಿನಿಕ್‌ಗಳಲ್ಲಿ ಅತ್ಯಾಧುನಿಕ ಸವಲತ್ತುಗಳನ್ನು ನೀಡಲು ಇಲಾಖೆ ಆದ್ಯತೆ ನೀಡಿದ್ದು, ಆಧುನಿಕ ಸ್ಟ್ರೆಚ್ಚರ್, ಬೆಡ್, ಆಕ್ಸಿಜನ್ ಪರಿಕರಗಳು, ಜೀವನಾವಶ್ಯಕ ಔಷಧಗಳು, ಜಿ.ಪಿ. ಆಪರೇಟಸ್, ಇಸಿಜಿ ಸೌಲಭ್ಯ, ರೆಫ್ರಿಜರೇಟರ್, ಕೋವಿಡ್ ಪರೀಕ್ಷಾ ಸಲಕರಣೆಗಳು, ವ್ಹೀಲ್ ಚೇರ್, ಪ್ರಯೋಗಾಲಯ ಸಲಕರಣೆಗಳು, ಅವಶ್ಯಕ ವೈದ್ಯಕೀಯ ಪರಿಕರಗಳು, ಸಿಬ್ಬಂದಿಗೆ ಆಸನ ವ್ಯವಸ್ಥೆ, ಸೇವಾ ಕೇಂದ್ರಗಳ ಆರಂಭಕ್ಕೆ ಅಗತ್ಯ ಸಲಕರಣೆಗಳನ್ನು ಹೊಂದಿರಲಿದೆ.

ಈ ಸಂಚಾರಿ ಆರೋಗ್ಯ ಕ್ಲಿನಿಕ್‌ಗಳ ಸೇವೆ ಕುರಿತು ಇಲಾಖೆ, ಪ್ರಚಾರದ ಮೂಲಕ ಜಾಗೃತಿ ಮೂಡಿಸಲು ಉದ್ದೇಶಿಸಿದ್ದು, ನಾಮಫಲಕಗಳ ಮೂಲಕ ಸೇವಾ ಅವಧಿಯನ್ನು ಪ್ರಚೂರ ಪಡಿಸಲಿದೆ. ಚಿಕಿತ್ಸೆಗೆ ಬರುವ ಪ್ರತಿ ಕಾರ್ಮಿಕನಿಗೆ ಕ್ರಮ ಸಂಖ್ಯೆ ನೀಡಿ ಪ್ರತ್ಯೇಕ ಒಪಿಡಿ ದಾಖಲೆ ನಿರ್ವಹಣೆ, ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಭಿತರಿಗೆ ಔಷಧೋಪಚಾರಗಳನ್ನು ಒದಗಿಸಲಿದೆ.

ಸ್ಥಳದಲ್ಲಿಯೇ ಪರೀಕ್ಷೆಗಳನ್ನು ಕೈಗೊಂಡು ವರದಿ ಮತ್ತು ಚಿಕಿತ್ಸೆ ನೀಡಲು ಅನುವಾಗುವಂತೆ ಪ್ರಯೋಗಾಲಯದ ಉಪಕರಣಗಳನ್ನು ಇರಿಸಲಾಗಿದೆ.

ತುರ್ತು ಚಿಕಿತ್ಸೆ ಮತ್ತು ಅಪಘಾತ ಸಂದರ್ಭದಲ್ಲಿ ರೋಗಿಯನ್ನು ಹೆಚ್ಚಿನ ಚಿಕಿತ್ಸೆಗೆ ಇಎಸ್ಐ ಅಥವಾ ಉನ್ನತೀಕರಿಸಿದ ಆಸ್ಪತ್ರೆಗಳಿಗೆ ರವಾನಿಸಲು ಈ ಸೇವೆ ಸಹಕಾರಿ ಆಗಿದೆ.

ಆಕರ್ಷಕವಾಗಿ ರೂಪಿಸಿ ವಿನ್ಯಾಸಗೊಳಿಸಲಾಗಿರುವ ಈ ಆರೋಗ್ಯ ಕ್ಲಿನಿಕ್‌ಗಳಲ್ಲಿ ಸೇವೆಗಳ ಆನ್‌ಲೈನ್ ವರದಿಗಾಗಿ ರಿಯಲ್ ಟೈಮ್ ರಿಪೋರ್ಟಿಂಗ್, ಜಿಪಿಎಸ್ ಟ್ರೇಸಿಂಗ್ ಸಿಸ್ಟಮ್, ರೋಗಿಯ ವಿವರಗಳನ್ನು ಎಂಐಎಂನಲ್ಲಿ ಅಪ್ ಲೋಡ್ ಮಾಡಲಾಗಿದ್ದು, ಇದಕ್ಕಾಗಿ ಬಿಎಸ್-6 ಮಾದರಿಯ ವಾಹನಗಳನ್ನು ಇಲಾಖೆಯಲ್ಲಿ ಬಳಸಿಕೊಳ್ಳಲಾಗಿದೆ.

ತುರ್ತು ಸಂದರ್ಭಗಳಲ್ಲಿ ಶ್ರಮಿಕ್ ಸಂಜೀವಿನಿ ಸೇವೆಯನ್ನು ಸಹಾಯವಾಣಿ ಸಂಖ್ಯೆಗೆ 155214ಗೆ ಕರೆ ಮಾಡಿ ಪಡೆಯಬಹುದಾಗಿದ್ದು, ಯೋಜನೆಯ ತುರ್ತು ಜಾರಿಗೆ ಅನುವಾಗುವಂತೆ ಕಾರ್ಮಿಕ ವಿಮಾ ಸಂಸ್ಥೆಯ ವೈದ್ಯಕೀಯ ಮತ್ತು ಸಿಬ್ಬಂದಿ ಸೇವೆಯನ್ನು ಪಡೆದುಕೊಳ್ಳಲು ಕಾರ್ಮಿಕ ಇಲಾಖೆಯು ಸಿದ್ಧತೆ ನಡೆಸಿದೆ.

ಶ್ರಮಿಕ್ ಸಂಜೀವಿನ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಆಗಿದೆ. ಈ ಯೋಜನೆ ಯಶಸ್ವಿ ಜಾರಿಗೆ ಇಲಾಖೆ ಕಟಿಬದ್ಧವಾಗಿದ್ದು, ದಿನ ನಿತ್ಯದ ಬಿಡುವಿಲ್ಲದ ಕೆಲಸದ ನಡುವೆ ಶ್ರಮಿಕ ವರ್ಗ ತಾವಿದ್ದೆಡೆಯೇ ಉಚಿತ ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಬೇಕು ಎಂಬುದೇ ಈ ಯೋಜನೆಯ ಹಿಂದಿನ ಮಹದುದ್ದೇಶ.

**– ಶಿವರಾಮ ಹೆಬ್ಬಾರ್**

**ಕಾರ್ಮಿಕಸಚಿವರು**

# ಕೆ.ಡಿ.ಸಿ.ಸಿ ಬ್ಯಾಂಕ್ ಮೂಲಕ ಶೈಕ್ಷಣಿಕ ಸಾಲ ಸೌಲಭ್ಯ

ಕಳೆದ ನೂರು ವರ್ಷಗಳಿಂದ ಉತ್ತರ ಕನ್ನಡ ಜಿಲ್ಲೆಯ ರೈತರ ಕೃಷಿಕರ ಹಾಗೂ ವ್ಯಾಪಾರಿಗಳ ಜೀವನಾಡಿಯಾಗಿ ಕಾರ್ಯನಿರ್ವಹಿಸುತ್ತಿರುವ ಉತ್ತರಕನ್ನಡ ಜಿಲ್ಲಾ ಮಧ್ಯವರ್ತಿ ಬ್ಯಾಂಕ್ (ಕೆಡಿಸಿಸಿ) ಈ ಬಾರಿ ನೂತನ ಯೋಜನೆ ಮೂಲಕವಾಗಿ ಗ್ರಾಮೀಣ ಭಾಗದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಹೊಸ ಭರವಸೆಯನ್ನು ಹಾಗೂ ಧೈರ್ಯವನ್ನು ತುಂಬಿದೆ.

ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಶಿವರಾಮ ಹೆಬ್ಬಾರ್ ಅವರು ಕಳೆದ ತಿಂಗಳು ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಮೂಲಕವಾಗಿ ವಿದ್ಯಾಭ್ಯಾಸ ಸಾಲ ನೀಡುವುದಾಗಿ ಘೋಷಿಸಿದ್ದರು. ಈ ಯೋಜನೆಯು ಜಿಲ್ಲೆಯ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹಾಗೂ ಪಾಲಕರಿಗೆ ಸಂತಸ ತಂದಿದೆ. ಸಚಿವರಾದ ಶಿವರಾಮ್ ಹೆಬ್ಬಾರ್ ಅವರು, ತಮ್ಮ ಯಲ್ಲಾಪುರದ ಕಾರ್ಯಾಲಯದಲ್ಲಿ ಪ್ರತಿನಿತ್ಯ ನಡೆಯುವ ಜನಸ್ಪಂದನ ಕಾರ್ಯಕ್ರಮದಲ್ಲಿ ಜಿಲ್ಲೆಯ ನೂರಾರು ವಿದ್ಯಾರ್ಥಿಗಳು ತಮಗೆ ತಾಂತ್ರಿಕ ಕಾರಣದಿಂದ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಶೈಕ್ಷಣಿಕ ಸಾಲ ಪಡೆಯುವುದು ಸಾಧ್ಯವಾಗುವುದಿಲ್ಲ ಎಂಬ ಮಾತುಗಳು ಪ್ರತಿವರ್ಷ ಅವರಿಗೆ ಕಾಡುತ್ತಿತ್ತು. ಒಂದು ಬಾರಿ ಯಲ್ಲಾಪುರ ತಾಲ್ಲೂಕು ಗ್ರಾಮೀಣ ಭಾಗದ ಬಡ ಪ್ರತಿಭಾವಂತ ವಿದ್ಯಾರ್ಥಿನಿ ಶಾಸಕರ ಬಳಿ ಬಂದು ಹೆಬ್ಬಾರ್ ಸರ್ ನಾನು ತಮ್ಮನ್ನು ನಂಬಿ ಇಲ್ಲಿ ಬಂದಿದ್ದೇನೆ. ಸಾವಿರಾರು ಜನರ ಕಷ್ಟಕ್ಕೆ ಮಿಡಿಯುವ ನಿಮ್ಮ ಮನಸ್ಸು ನನ್ನ ಕಷ್ಟಕ್ಕೆ ಪರಿಹಾರ ಒದಗಿಸುತ್ತದೆ ಎಂದು ಬಲವಾಗಿ ನಂಬಿದ್ದೇನೆ. ತಮ್ಮ ನಿಯಮಕ್ಕಿಂತ ಕೇವಲ 6 ಕಿಲೋಮೀಟರ್ ಅಂತರ ಹೆಚ್ಚಿರುವ ಕಾರಣ ನೀಡಿ ನಮ್ಮ ಬ್ಯಾಂಕನಲ್ಲಿ ನಿಮಗೆ ಸಾಲ ನೀಡಲು ಸಾಧ್ಯವಿಲ್ಲ ಎಂದು ರಾಷ್ಟ್ರೀಕೃತ ಬ್ಯಾಂಕ ಅಧಿಕಾರಿಗಳು ಹೇಳಿರುವುದು ನನ್ನ ವಿದ್ಯಾಭ್ಯಾಸದ ಆಸೆಯನ್ನು ಹುಸಿ ಮಾಡಿದೆ ದಯಮಾಡಿ ನನ್ನ ವಿದ್ಯಾಭ್ಯಾಸಕ್ಕೆ ಸಾಲ ನೀಡುವಂತೆ ಅಧಿಕಾರಿಗಳಿಗೆ ತಿಳಿಸಿ ಎಂದು ಆ ವಿದ್ಯಾರ್ಥಿನಿ ಕಣ್ಣೀರು ಹಾಕುತ್ತಾ ಹೇಳಿದ್ದ ಮಾತುಗಳು ಸಚಿವರ ಮನ ಮುಟ್ಟಿತ್ತು.

ಆ ದಿನ ಸಂಜೆ ಸಚಿವರಾದ ಶಿವರಾಮ ಹೆಬ್ಬಾರ್ ಅವರು ದೂರವಾಣಿ ಮೂಲಕವಾಗಿ ರಾಜ್ಯದ ಹಿರಿಯ ಅಧಿಕಾರಿಗಳನ್ನು, ಸಹಕಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಅವರನ್ನು ಹಾಗೂ ಸಹಕಾರಿ ಇಲಾಖೆಯ ಅಧಿಕಾರಿಗಳೊಂದಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ಕೂಲಂಕುಷವಾಗಿ ಚರ್ಚಿಸಿ ಶೈಕ್ಷಣಿಕ ಸಾಲ ನೀಡುವುದಕ್ಕೆ ಇರುವ ನಿಬಂಧನೆ, ಸಾಲದ ಮಿತಿ ಹಾಗೂ ಇನ್ನುಳಿದ ಎಲ್ಲಾ ವಿಷಯಗಳ ಬಗ್ಗೆ ಅಧ್ಯಯನ ನಡೆಸಿ ತಮ್ಮ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಮಧ್ಯವರ್ತಿ ಬ್ಯಾಂಕ ಮೂಲಕವಾಗಿ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ನೀಡುವ ಮಹತ್ವದ ಯೋಜನೆಯನ್ನು ಜಾರಿಗೊಳಿಸಿದ್ದಾರೆ.

ಈ ಯೋಜನೆಯಿಂದಾಗಿ ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ, ತಮ್ಮೂರಿನ ಕೆಡಿಸಿಸಿ ಬ್ಯಾಂಕ್ ಶಾಖೆಯಲ್ಲಿ ಸೂಕ್ತ ದಾಖಲೆಗಳನ್ನು ಒದಗಿಸುವುದರ ಮೂಲಕ ಸಾಲವನ್ನು ಪಡೆಯಬಹುದಾಗಿದೆ. ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿ ಯಾರು ಸಹ ಸಾಲ ಸಿಗದೆ ವಿದ್ಯಾಭ್ಯಾಸ ಮೊಟಕುಗೊಳಿಸಿದ ಪರಿಸ್ಥಿತಿ ಮುಂದೆ ಬರಬಾರದು ಎಂಬ ದೂರ ದೃಷ್ಟಿಯಿಂದ ಶಿವರಾಮ ಹೆಬ್ಬಾರವರು ಘೋಷಿಸಿರುವ ಈ ಯೋಜನೆಯು, ಅವರ ಜನಪರವಾದ ಕಾಳಜಿಗೆ ಹಿಡಿದ ಕೈಗನ್ನಡಿಯಾಗಿದೆ.





# ಕೊಟ್ಟಮಾತು ಉಳಿಸಿಕೊಂಡ ಹೆಬ್ಬಾರ್

2021ರ ಸ್ಥಳೀಯ ಸಂಸ್ಥೆಗಳ ಮತದಾರರಿಂದ ಆಯ್ಕೆಯಾಗುವ ವಿಧಾನ ಪರಿಷತ್ ಸ್ಥಾನಕ್ಕೆ ಉತ್ತರ ಕನ್ನಡದಲ್ಲಿ ಬಿಜೆಪಿಯಿಂದ ಮೊದಲ ಬಾರಿಗೆ ಗಣಪತಿ ಉಳ್ವೇಕರ್ ಆಯ್ಕೆಯಾಗಿ ಇತಿಹಾಸ ಸೃಷ್ಟಿಸಿದ್ದಾರೆ. ಈ ಇತಿಹಾಸದ ಹಿಂದೆ ಹತ್ತಾರು ಸಾವಿರ ಬಿಜೆಪಿ ಕಾರ್ಯಕರ್ತರ ಶ್ರಮವಿದೆ ಎನ್ನುವುದನ್ನು ಮರೆಯುವಂತಿಲ್ಲ. ಅಂತೆಯೇ ಈ ಹತ್ತಾರು ಸಾವಿರ ಕಾರ್ಯಕರ್ತರನ್ನ ಕೂಡಿಸಿಕೊಂಡು ಯಶಸ್ವಿಯಾಗಿ ಚುನಾವಣೆ ನಡೆಸಿ, ಅಭ್ಯರ್ಥಿಯನ್ನ ಗೆಲ್ಲಿಸಿಕೊಂಡು ಬಂದ ಶ್ರೇಯಸ್ಸು ಯಲ್ಲಾಪುರ- ಮುಂಡಗೋಡ ವಿಧಾನಸಭಾ ಕ್ಷೇತ್ರದ ಶಾಸಕ, ಕಾರ್ಮಿಕ ಮತ್ತು ಅಂದಿನ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್ ಅವರಿಗೆ ಸಲ್ಲುತ್ತದೆ.

ರಾಜಕೀಯ ತಂತ್ರಗಾರಿಕೆಯನ್ನು ಬಹಳ ಚೆನ್ನಾಗಿ ಅರಿತಿರುವ ಶಿವರಾಮ ಹೆಬ್ಬಾರ್, ಚುನಾವಣೆಗಳನ್ನ ಯಶಸ್ವಿಯಾಗಿ ಗೆಲುವಿನ ದಡಕ್ಕೆ ತರುವುದರಲ್ಲಿ ನಿಸ್ಸೀಮರು. ಹೆಬ್ಬಾರ್ ತಮ್ಮ ರಾಜಕೀಯ ಜೀವನದಲ್ಲಿ ಎದುರಿಸಿದ ಚುನಾವಣೆಗಳಲ್ಲಿ ಒಮ್ಮೆ ಮಾತ್ರ ಸೋಲು ಕಂಡಿದ್ದವರು, ಮತ್ತೆ ಸೋಲೆಂಬುದನ್ನು ತಿರುಗಿಯೂ ನೋಡಿದವರಲ್ಲ. ಅಲ್ಲಲ್ಲಿ ಕಾರ್ಯಕರ್ತರ ಪಡೆಗಳನ್ನು ಚುನಾವಣೆಗಾಗಿಯೇ ಕಟ್ಟಿ, ವಿರೋಧ ಪಕ್ಷದವರನ್ನೂ ತಮ್ಮ ಚಾಣಾಕ್ಷತನದಿಂದ ಸೆಳೆದು ವಿಧಾನ ಪರಿಷತ್ ಚುನಾವಣೆಯಲ್ಲಿ ಗಣಪತಿ ಉಳ್ವೇಕರ್ ಅವರಿಗೆ ಸ್ವಪಕ್ಷೀಯರ ಜೊತೆಗೆ ವಿರೋಧ ಪಕ್ಷದ ಕಾರ್ಯಕರ್ತರ ಮತವನ್ನೂ ಪಡೆಯಲು ಕಾರಣೀಕರ್ತರಾದರು.

ಶಿವರಾಮ ಹೆಬ್ಬಾರ್ ಅಷ್ಟು ಬೇಗ ಸೋಲನ್ನೊಪ್ಪಿಕೊಳ್ಳುವವರಲ್ಲ ಎಂಬುದು ಯಲ್ಲಾಪುರ- ಮುಂಡಗೋಡ ಕ್ಷೇತ್ರದ ಜನತೆಗೆ ತಿಳಿದಿರುವ ವಿಚಾರ. ಹಾಗೆಯೇ ತಮ್ಮ ಚುನಾವಣೆಯಾಗಲಿ, ತಮ್ಮ ಪಕ್ಷದ ಯಾರದ್ದೆ ಚುನಾವಣೆಯಾಗಲಿ, ಸೋಲು ಎಂಬ ಪದ ಕೂಡ ತಮ್ಮತ್ತ ಸುಳಿಯದಂತೆ ನೋಡಿಕೊಳ್ಳುವ ಚಾಣಕ್ಯ ನಡೆಯ ಹೆಬ್ಬಾರ್, ಗಣಪತಿ ಉಳ್ವೇಕರ್ ಅವರಿಗೆ ಬೆಂಬಲವಾಗಿ ನಿಂತಿದ್ದು ಅಭ್ಯರ್ಥಿಯಾಗಿದ್ದ ಉಳ್ವೇಕರ್ ಅವರಿಗೂ ಬಲ ಕೊಟ್ಟಂತಾಗಿತ್ತು.



ಬಿಜೆಪಿ ಅಭ್ಯರ್ಥಿ ಗಣಪತಿ ಉಳ್ವೇಕರ್ ಪರ ಪ್ರಚಾರ ಸಭೆಯಲ್ಲಿ ಸಚಿವ ಹೆಬ್ಬಾರ

## ರಾಜಕಾರಣಿಗೆ ನೀತಿ, ಜನರ ಮೇಲೆ ಪ್ರೀತಿ ಇರಬೇಕು



## ಯಲ್ಲಾಪುರ ಕ್ಷೇತ್ರದಲ್ಲಿ ಬಿಜೆಪಿಗೆ ಹೆಚ್ಚು ಮತ

### ಸಚಿವ ಹೆಬ್ಬಾರ್‌ರ ಸಂಘಟಿತ ಪ್ರಯತ್ನ



### ಕೊಟ್ಟಮಾತು ಉಳಿಸಿಕೊಂಡ ಹೆಬ್ಬಾರ್

ಶಿವರಾಮ ಹೆಬ್ಬಾರ್, ತಮ್ಮನ್ನು ಮರಳಿ ಬಿಜೆಪಿಗೆ ಸೇರ್ಪಡಿಸಿಕೊಂಡಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ವಿಧಾನ ಪರಿಷತ್ ಚುನಾವಣೆಯ ಕುರಿತಾಗಿ ಕೊಟ್ಟಿದ್ದ ಮಾತನ್ನು ಉಳಿಸಿಕೊಂಡಿದ್ದಾರೆ. ಯಲ್ಲಾಪುರದಲ್ಲಿ ವಿಧಾನ ಪರಿಷತ್ ಚುನಾವಣಾ ಪೂರ್ವ ನಡೆದಿದ್ದ ಸಮಾವೇಶದಲ್ಲಿ ಬಿ.ಎಸ್. ಯಡಿಯೂರಪ್ಪನವರಿಗೆ ಈ ಬಾರಿ ಬಿಜೆಪಿಯ ವಿಧಾನ ಪರಿಷತ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರುವುದಾಗಿ ಮಾತು ಕೊಟ್ಟಿದ್ದರು. ಛಲದಂಕಮಲ್ಲನಂತೆ ಚುನಾವಣಾ ಹೋರಾಟದಲ್ಲಿ ಹಗಲಿರುಳು ಹೋರಾಡಿ ಕೊಟ್ಟ ಮಾತಿನಂತೆ ಗಣಪತಿ ಉಳ್ವೇಕರ್ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿಸಿ, ನೂತನ ಮುಖ್ಯಮಂತ್ರಿಗಳ ಕೈ ಬಲಪಡಿಸಿದ್ದಾರೆ.

### ಚುನಾವಣಾ ತಂತ್ರಗಾರಿಕೆ, ಚಾಣಕ್ಯ ನೀತಿ

ಶಿವರಾಮ ಹೆಬ್ಬಾರ್ ಅವರ ಚುನಾವಣಾ ತಂತ್ರಗಾರಿಕೆ ಬಹುಶಃ ಯಾರಿಗೂ ಅಷ್ಟೊಂದು ಸರಳವಾಗಿ ತಿಳಿಯುವಂಥದ್ದಲ್ಲ. ಬಿಜೆಪಿ ಮೂಲದವರಾಗಿದ್ದರೂ ಹೆಬ್ಬಾರ್ ಅಂದಿನ ರಾಜಕೀಯಕ್ಕೆ ತಕ್ಕಂತೆ ಕಾಂಗ್ರೆಸ್ ಸೇರಿ, ಮರಳಿ ಸ್ವಪಕ್ಷಕ್ಕೆ ಸೇರ್ಪಡೆಗೊಂಡಿದ್ದರು. ಕಾಂಗ್ರೆಸ್‌ನಲ್ಲಿದ್ದ ಸಂದರ್ಭದಲ್ಲೂ ಅನೇಕ ಮುಖಂಡರುಗಳ ಸ್ನೇಹ ಬೆಳೆಸಿಕೊಂಡಿದ್ದ ಹೆಬ್ಬಾರ್, ಪಕ್ಷಕ್ಕಿಂತಲೂ ವೈಯಕ್ತಿಕವಾಗಿ ಅನೇಕರಿಗೆ ಬಹಳ ಹತ್ತಿರದವರಾಗಿ, ಸ್ನೇಹಪರವಾಗಿದ್ದರು. ಇದೇ ತಂತ್ರಗಾರಿಕೆಯನ್ನು ಚುನಾವಣೆಯಲ್ಲಿ ಬಳಸಿ, ಕಾಂಗ್ರೆಸ್ ಪಕ್ಷದಲ್ಲಿದ್ದವರ ಮತಗಳನ್ನೂ ಬಿಜೆಪಿಗೆ ಪಡೆಯುವಲ್ಲಿ ಯಶಸ್ವಿಯಾದರು.

ಡಾಕ್ಟರ್ ಪ್ಲಸ್



# ಸುರಕ್ಷಿತ ಮಾತೃತ್ವಕ್ಕೆ ಗರ್ಭಿಣಿಯರಿಗೂ ಕೋವಿಡ್ ಲಸಿಕೆ

ಜಗತ್ತಿನ ಅತಿದೊಡ್ಡ ಉಚಿತ ಕೋವಿಡ್ ಲಸಿಕಾಕರಣವು ಪ್ರಗತಿಯಲ್ಲಿದೆ. ಹೆಚ್ಚು ರಿಸ್ಕಿನಲ್ಲಿರುವವರಿಗೆ ಮುನ್ನೆಚ್ಚರಿಕಾ ಡೋಸ್ ಸಹಾ ಆರಂಭಗೊಂಡಿದೆ.

ಕೇಂದ್ರ ಆರೋಗ್ಯ ಸಚಿವಾಲಯವು ಗರ್ಭಿಣಿ ಮಹಿಳೆಯರಿಗೂ ಕೋವಿಡ್ ಲಸಿಕೆಯನ್ನು ನೀಡುವುದಕ್ಕೆ ಅನುಮೋದನೆ ನೀಡಿದೆ. ಈ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ತಲೆದೋರುವ ಸಂದೇಹಗಳಿಗೆ ಇಲ್ಲಿದೆ ಪರಿಹಾರ..



ಡಾ ಸೌಮ್ಯ ಕೆ.ವಿ.
ತಜ್ಞ ವೈದ್ಯರು ತಾಲೂಕು ಆಸ್ಪತ್ರೆ, ಯಲ್ಲಾಪುರ

● **ಗರ್ಭಿಣಿಯರಿಗೆ ಕೋವಿಡ್ ಲಸಿಕೆ ನೀಡುವುದು ಅಗತ್ಯವೇ?**

ಹೌದು ಗರ್ಭಿಣಿಯರಲ್ಲಿ ಬಹುತೇಕ ಕೋವಿಡ್ ಪ್ರಕರಣಗಳು ಲಕ್ಷಣರಹಿತವಾಗಿರುವದಾದರೂ, ಲಕ್ಷಣಗಳು ಕಂಡುಬಂದಲ್ಲಿ ತೀವ್ರಸ್ವರೂಪಕ್ಕೆ ಉಲ್ಬಣಗೊಂಡಿರುವದರಿಂದ ಗರ್ಭಾವಸ್ಥೆಯಲ್ಲಿ ಕೋವಿಡ್ ಲಸಿಕೆ ಪಡೆಯುವುದು ಅತ್ಯಗತ್ಯ.

● **ಗರ್ಭಿಣಿಯರಿಗೆ ಲಸಿಕೆ ಹಾಕುವುದು ಸುರಕ್ಷಿತವೇ?**

ಹೌದು. ಗರ್ಭಿಣಿಗೂ, ಹುಟ್ಟಲಿರುವ ಮಗುವಿಗೂ ಲಸಿಕೆ ಸುರಕ್ಷಿತವೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

● **ಅಡ್ಡ ಪರಿಣಾಮಗಳಾಗಬಹುದೇ?**

ಸೌಮ್ಯ ಸ್ವರೂಪದ ಜ್ವರ, ಮೈಕೈ ನೋವು, ಚುಚ್ಚುಮದ್ದಿನ ಸ್ಥಳದಲ್ಲಿ ನೋವು 1–3 ದಿನಗಳವರೆಗೆ ಕಾಣಿಸಿಕೊಳ್ಳಬಹುದು. ಗಂಭೀರ ಅಡ್ಡಪರಿಣಾಮಗಳೇನೂ ವರದಿಯಾಗಿಲ್ಲ.

● **ಗರ್ಭಾವಸ್ಥೆಯಲ್ಲಿ ಯಾವಾಗ ಕೋವಿಡ್ ಲಸಿಕೆ ಪಡೆಯಬೇಕು?**

ಗರ್ಭಾವಸ್ಥೆಯಲ್ಲಿ ಯಾವುದೇ ತಿಂಗಳಿನಲ್ಲಿಯೂ ಕೋವಿಡ್ ಲಸಿಕೆ ಪಡೆಯಬಹುದು. ಆದಷ್ಟು ಬೇಗ ಪಡೆಯುವುದೇ ಉತ್ತಮ.

● **ಆದ್ಯತೆ ಯಾರಿಗಿದೆ?**

ಎಲ್ಲಾ ಗರ್ಭಿಣಿಯರಿಗೂ ಆದ್ಯತೆಯಿದ್ದು 35 ವರ್ಷ ಮೇಲ್ಪಟ್ಟ, ಸ್ಥೂಲದೇಹದ, ಈಗಾಗಲೇ ಮಧುಮೇಹ ಅಥವಾ ಅಧಿಕ ರಕ್ತದೊತ್ತಡದ ಸಮಸ್ಯೆಯುಳ್ಳ, ರಕ್ತ ಹೆಪ್ಪುಗಟ್ಟುವ ತೊಂದರೆ ಇರುವ ಗರ್ಭಿಣಿಯರಿಗೆ ಇನ್ನೂ ಹೆಚ್ಚಿನ ಆದ್ಯತೆ ನೀಡಬೇಕಿದೆ.

● **ಕೋವಿಡ್ ಲಸಿಕೆ ಪಡೆಯದಿದ್ದರೆ ಏನಾಗಬಹುದು?**

ಲಸಿಕೆ ಪಡೆದವರಲ್ಲಿ ಸೋಂಕಿನ ಪ್ರಮಾಣ ಕಡಿಮೆ; ಒಂದೊಮ್ಮೆ ಸೋಂಕಾದರೂ ರೋಗ ತೀವ್ರತೆ ಕಡಿಮೆಯೆಂಬುದು ಸಾಬೀತಾಗಿದೆ. ಹೀಗಾಗಿ ಲಸಿಕೆ ಪಡೆಯದೇ ಹೋದ ಗರ್ಭಿಣಿ

ಮಹಿಳೆಯರಿಗೆ ಸೋಂಕಾದಲ್ಲಿ ತಾಯಿ ಹಾಗೂ ಮಗು ಇಬ್ಬರಿಗೂ ಅಪಾಯವಾಗುವ ಸಾಧ್ಯತೆ ಇದೆ. ಅವಧಿಪೂರ್ವ ಪ್ರಸವ, ಕಡಿಮೆ ತೂಕದ ಶಿಶು, ಗರ್ಭದಲ್ಲಿಯೇ ಶಿಶುಮರಣ ಈ ಅಪಾಯಗಳಿವೆ.

● **ಮೊದಲ ಹೆರಿಗೆ ಸಿಸೇರಿಯನ್ ಆಗಿದ್ದಲ್ಲಿ ಕೋವಿಡ್ ಲಸಿಕೆ ಪಡೆಯಬಹುದೇ?**

ಹೌದು.

● **ಆರ್–ಹೆಚ್ ನೆಗೆಟಿವ್ ರಕ್ತದ ಗುಂಪಿನ ಗರ್ಭಿಣಿ ಮಹಿಳೆಯರು ಕೋವಿಡ್ ಲಸಿಕೆ ಪಡೆಯಬಹುದೇ?**

ಹೌದು

● **ಹೃದಯ ಕಾಯಿಲೆ, ಫಿಟ್ಸ್ ರೋಗದ ಗರ್ಭಿಣಿ ಮಹಿಳೆಯರು ಕೋವಿಡ್ ಲಸಿಕೆ ಪಡೆಯಬಹುದೇ?**

ಮೆಡಿಕಲ್ ಕಾಲೇಜು ಅಥವಾ ಹೆಚ್ಚಿನ ಸೌಲಭ್ಯಗಳಿರುವ ಕೇಂದ್ರದಲ್ಲಿ ತಜ್ಞರ ಸಲಹೆ ಪಡೆದು ಮುಂದುವರೆಯಬೇಕು.

● **ಕೋವಿಡ್ ಲಸಿಕೆ ಪಡೆದ ಬಳಿಕ ರಕ್ತ ಪೂರಣಕ್ಕೆ ಒಳಗಾಗಬಹುದೇ?**

ಹೌದು.

● **ಈ ಲಸಿಕೆಯ ಜೊತೆಗೆ ಗರ್ಭಾವಸ್ಥೆಯ ಟೆಟನಸ್ ಚುಚ್ಚುಮದ್ದು ಪಡೆಯಬಹುದೆ?**

ಹೌದು.

● **ಯಾವ ಕೋವಿಡ್ ಲಸಿಕೆ ಗರ್ಭಿಣಿಯರಿಗೆ ಉತ್ತಮ?**

ಕೋವಿಶೀಲ್ಡ್, ಕೊವಾಕ್ಸಿನ್, ಸ್ಪುಟ್ನಿಕ್ ಕೋವಿಡ್ ಲಸಿಕೆಗಳು ಗರ್ಭಿಣಿಯರಲ್ಲಿ ಸುರಕ್ಷಿತ. ಗಂಡಾಂತರ ಗರ್ಭಿಣಿಯರಿಗೆ ಕೊವ್ಯಾಕ್ಸಿನ್ ನೀಡಲು ಹಾಗೂ ಉಳಿದ ಗರ್ಭಿಣಿಯರಿಗೆ ಕೋವಿಶೀಲ್ಡ್ ನೀಡಲು ತಜ್ಞರು ಸೂಚಿಸಿದ್ದಾರೆ.


● **ಕೋವಿಡ್ ಲಸಿಕೆ ಪಡೆದ ಕೆಲ ದಿನಗಳಲ್ಲಿ ಗರ್ಭಿಣಿಯಾದರೆ ಏನಾದರೂ ಆತಂಕವಿದೆಯೆ?**

ಇಲ್ಲ.

● **ಈಗಾಗಲೇ ಕೋವಿಡ್ ಸೋಂಕಿಗೊಳಗಾದ ಗರ್ಭಿಣಿ ಲಸಿಕೆಯನ್ನು ಯಾವಾಗ ಪಡೆಯಬೇಕು?**

ಕೋವಿಡ್ ಸೋಂಕು ದೃಢಪಟ್ಟ ಮೂರು ತಿಂಗಳ ಬಳಿಕ ಲಸಿಕೆ ಪಡೆಯಬಹುದು.

ಕೋವಿಡ್ ಲಸಿಕೆ ಎರಡು ಡೋಸ್ ಪಡೆದ ಬಳಿಕವೂ ಗರ್ಭಿಣಿಯರು ಮುಖಗವಸು ಧಾರಣೆ, ಸಾಮಾಜಿಕ ಅಂತರಕಾಪಾಡುವಿಕೆ ಹಾಗೂ ಕೈಗಳ ನೈರ್ಮಲ್ಯದಂತಹ ಮೂಲಭೂತ ಎಚ್ಚರಿಕಾ ಕ್ರಮಗಳನ್ನು ತಪ್ಪದೇ ವಹಿಸಬೇಕು. ಸುರಕ್ಷಿತ ಮಾತೃತ್ವಕ್ಕೆ, ತಾಯಿ ಶಿಶುವಿನ ಸಂಪೂರ್ಣ ಸ್ವಾಸ್ಥ್ಯಕ್ಕೆ ಸರ್ಕಾರ ಉಚಿತವಾಗಿ ನೀಡುತ್ತಿರುವ ಕೋವಿಡ್ ಲಸಿಕಾಕರಣದಲ್ಲಿ ಎಲ್ಲ ಗರ್ಭಿಣಿಯರೂ ಪಾಲ್ಗೊಳ್ಳಬೇಕಿದೆ.





# ಕೋಲ್ಮಿಂಚಿನ ಸಮರಕಲಿ, ಸ್ವಾತಂತ್ರ್ಯದ ನೇತಾಜಿ!

– ದಿವ್ಯಾ ಹೆಗಡೆ ಕಬ್ಬಿನಗದ್ದೆ



Give me blood, I promise you freedom! ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಅದೆಷ್ಟೋ ಜನರಿಗೆ ಸ್ಫೂರ್ತಿ ತುಂಬಿದ ಮಾತಿದು. ಅಂದು ಸಿಡಿಲಬ್ಬರದ ಈ ಮಾತು ಕೇಳಿದ್ದ ಪ್ರತಿಯೊಬ್ಬರಲ್ಲೂ ದೇಶ ಪ್ರೇಮದ ಕಿಚ್ಚು ಜಾಗೃತವಾಗಿತ್ತು. ರಕ್ತ ಚೆಲ್ಲಿ ಸ್ವಾತಂತ್ರ್ಯ ಪಡೆಯದೇ, ಅಹಿಂಸೆಯ ಹೆಸರಿನಲ್ಲಿ ಉಪವಾಸ ಕುಳಿತುಬಿಟ್ಟರೆ ನಾವು ಎಂದಿಗೂ ಸ್ವಾತಂತ್ರ್ಯ ಪಡೆಯಲಾರೆವು ಎಂಬ ಅವರ ಮಾತನ್ನು ಘೋಷರಿಂದ ಹಿಡಿದು ತಿಲಕರವರೆಗೆ ಎಲ್ಲರೂ ಒಪ್ಪಿದ್ದರು. ಚರಕ ಹಿಡಿದು ಕೂರುವುದರಿಂದ ಪರಕೀಯರ ದಾಸ್ಯದಿಂದ ಮುಕ್ತಿ ಅಸಾಧ್ಯ ಎಂದು ಸಾವಿರಾರು ದೇಶಭಕ್ತ ಬಂಧುಗಳು ಆ ವ್ಯಕ್ತಿಯ ಬೆನ್ನಿಗೆ ನಿಂತಿದ್ದರು. ಒಬ್ಬ ವ್ಯಕ್ತಿ ತನ್ನ ಸಿದ್ಧಾಂತಕ್ಕಾಗಿ ಸಾವನ್ನಪ್ಪಬಹುದು. ಆದರೆ ಆತನ ಮರಣಾನಂತರವೂ ಉಳಿಯುವ ಆ ಸಿದ್ಧಾಂತ ಸಾವಿರ ಜನರಲ್ಲಿ ಅವತರಿಸುತ್ತದೆ ಎನ್ನುತ್ತಿದ್ದ ಆತನ ದೇಶಭಕ್ತಿಯ ಅದಮ್ಯ ಸ್ಥಾಯಿನಿಷ್ಠೆಗೆ ಸಾವಿರಾರು ದೇಶಭಕ್ತರು ಚಕಿತರಾಗಿದ್ದರು. ಹೀಗೆ ಶಾಂತಿಯ ಮಂತ್ರ ಹೇಳುತ್ತ, ಅಹಿಂಸೆಯ ಪಾಠ ಮಾಡುತ್ತ, ಬಣ್ಣದ ಮಾತಿನಿಂದ ದೇಶದ ರಾಜಕೀಯದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದವರಿಗೆ ಸಿಂಹಸ್ವಪ್ನವಾಗಿ ಕಾಡಿದ ಮಹಾನ್ ಕ್ರಾಂತಿಕಾರಿ ನೇತಾಜಿ ಸುಭಾಷ್ ಚಂದ್ರ ಬೋಸರು.

ಬೋಸರು ಆ ಸಮಯದಲ್ಲಿ ಭಾರತೀಯ ಕ್ರಾಂತಿಕಾರಿ ನಾಯಕರುಗಳಲ್ಲೇ ಅಸಾಮಾನ್ಯ ಸೇನಾನಿ ಎನಿಸಿಕೊಂಡಿದ್ದರು. ಗಾಂಧೀಯವರ ಎದುರು ತಾವು ಒಪ್ಪದ ವಿಚಾರಗಳನ್ನು ಯಾವುದೇ ಮುಲಾಜಿಲ್ಲದೆ ಹೇಳಿ, ಪ್ರತಿಭಟಿಸಿ ಎದುರಾಳಿಯಾಗಿ ನಿಲ್ಲುತ್ತಿದ್ದರು. ಬರೀ ಅಹಿಂಸೆಯೆನ್ನುತ್ತ ಕುಳಿತುಬಿಟ್ಟರೆ ಬ್ರಿಟಿಷರನ್ನು ಓಡಿಸುವುದು ಸಾಧ್ಯವೇ ಇಲ್ಲವೆನ್ನುತ್ತಿದ್ದ ಅವರು ಗಾಂಧಿಯ ನಿಲುವುಗಳನ್ನು ತೀವ್ರವಾಗಿ ಖಂಡಿಸಿದ್ದರು. ಗಾಂಧಿ ಉಪವಾಸ, ಶಾಂತಿಯ ಮಾತಾಡುತ್ತಿದ್ದರೆ ಇದಕ್ಕೆ ಪೂರ್ಣ ವ್ಯತಿರಿಕ್ತವಾಗಿ ಬೋಸರು ತೀವ್ರಗಾಮಿ ಧೋರಣೆಯನ್ನು ಹೊಂದಿದ್ದರು. ನ್ಯಾಯಾನ್ಯಾಯಗಳ ಬಗ್ಗೆ ಒಳಸುಳಿವ ಗೊಂದಲಗಳಿಗೆ ತಾನೇ ಉತ್ತರ ಹುಡುಕಿಕೊಳ್ಳುತ್ತಾ ಬೆಳೆದ ಬೋಸರಿಗೆ ನೀತಿ – ಅನೀತಿಗಳ ಸ್ಪಷ್ಟ ವ್ಯತ್ಯಾಸ ತಿಳಿದಿತ್ತು. ಬಾಲ್ಯದಿಂದಲೇ ಆಜೀವ ದೇಶನಿಷ್ಠೆಯ ಕಿಚ್ಚು ಹೊತ್ತಿಸಿಕೊಂಡಿದ್ದ ಬೋಸರು ಕಲ್ಕತ್ತಾದಲ್ಲಿ ಅಧ್ಯಯನ ಮುಗಿಸಿ 1916 ರಲ್ಲಿ ಸ್ಕಾಟಿಷ್ ಚರ್ಚ್ ಕಾಲೇಜನ್ನು ಸೇರುವ ಹೊತ್ತಿಗೆ ರಾಷ್ಟ್ರೀಯವಾದಿ ಚಟುವಟಿಕೆಗಳನ್ನು ನಡೆಸಿದ ಕಾರಣದಿಂದ ಕಾಲೇಜಿಂದಲೇ ಹೊರಹಾಕಲ್ಪಟ್ಟಿದ್ದರು!

ಇದಾದ ಬಳಿಕ ಅವರನ್ನು ಪೋಷಕರು ಭಾರತೀಯ ನಾಗರಿಕ ಸೇವಾ ಪರೀಕ್ಷೆಯ ಸಿದ್ಧತೆಗಾಗಿ ಇಂಗ್ಲೆಂಡ್‌ನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ಕಳುಹಿಸಿದರು. ಆ ಕಾಲಕ್ಕೆ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಪದವಿ ಪಡೆದು, ಕರಿಕೋಟು ಹಾಕಿಕೊಂಡು ಗತ್ತಿನಿಂದ ಭಾರತಕ್ಕೆ ಯಾರೂ ಬಂದಿಳಿಯಬಹುದಿತ್ತು. ಆದರೆ ಐಸಿಎಸ್ ( ಖಟಿಜುಚಿಟ ಛಿತುಟ ,ಜಡಿತುಛಿಜ ) ಪಾಸಾಗುವುದು ಅಸಾಧ್ಯವೇ ಎನ್ನಬಹುದಾದ ಪರಿಸ್ಥಿತಿಯಿತ್ತು. ಯಾಕೆಂದರೆ ಭಾರತೀಯರು ಆ ಪರೀಕ್ಷೆಯನ್ನು ಪಾಸು ಮಾಡಿದರೆ ಉನ್ನತ ಆಡಳಿತಾತ್ಮಕ ಸ್ಥಾನಗಳನ್ನು ಭಾರತೀಯರೇ ಆಕ್ರಮಿಸಿಬಿಡುತ್ತಾರೆಂಬ ಭಯ ಬ್ರಿಟಿಷರಿಗಿತ್ತು. ಹಾಗಾಗಿ ಭಾರತೀಯರು ಪಾಸಾಗಲು ಅವಕಾಶವನ್ನೇ ಕೊಡುತ್ತಿರಲಿಲ್ಲ. ಅರವಿಂದ ಘೋಷರಂಥ ಪ್ರತಿಭಾನ್ವಿತರು ಐಸಿಎಸ್ ಪರೀಕ್ಷೆಯ ಎಲ್ಲ ಸಬ್ಜೆಕ್ಟುಗಳಲ್ಲೂ ಮೊದಲಿಗರಾಗಿ ಪಾಸಾಗಿ, ಇನ್ನೇನು ಐಸಿಎಸ್ ಅಧಿಕಾರಿಯಾಗಬೇಕು ಎನ್ನುವಷ್ಟರಲ್ಲಿ ಕುದುರೆ ಸವಾರಿ ಮಾಡಲಾಗಲಿಲ್ಲವೆಂಬ ಕ್ಷುಲ್ಲಕ ಕಾರಣಕ್ಕೆ ಅವರನ್ನು ಫೇಲು ಮಾಡಿದ್ದರು. ಇಂತಹ ಅಡೆತಡೆಗಳ ನಡುವೆಯೂ ಸುಭಾಷರು ಇಂಗ್ಲೆಂಡಿಗೆ ತೆರಳಿ, ಪರೀಕ್ಷೆ ಬರೆದು ಅಂತಿಮ ಪರೀಕ್ಷೆಯಲ್ಲಿ 4 ನೆಯವರಾಗಿ ತೇರ್ಗಡೆಯಾಗಿದ್ದರು! ಇಷ್ಟೆಲ್ಲ ಪ್ರತಿಭೆ–ಅವಕಾಶಗಳಿದ್ದರೂ ಇಂಗ್ಲೆಂಡಿನಲ್ಲಿ ಕುಳಿತಿದ್ದ ಬೋಸರಿಗೆ ಸದಾ ಭಾರತದ ಬಗ್ಗೆ ಚಿಂತೆ ಕಾಡುತ್ತಿತ್ತು. ಕೊನೆಗೆ ಭಾರತದಲ್ಲಿನ ರಾಜಕೀಯ ಮೇಲಾಟಗಳು, ರಾಷ್ಟ್ರೀಯವಾದಿ ಪ್ರಕ್ಷುಬ್ಧತೆಗಳನ್ನು ಕೇಳಿ ನೊಂದುಕೊಂಡ ಅವರು ಗಟ್ಟಿ ನಿರ್ಧಾರ ಮಾಡಿ, ಏಪ್ರಿಲ್ 1921 ರಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ಭಾರತಕ್ಕೆ ಹಿಂದಿರುಗಿದರು.

ಹಲವು ಕನಸುಗಳನ್ನು ಕಟ್ಟಿಕೊಂಡು ದೇಶಸೇವೆಯ ತುಡಿತದಲ್ಲಿ ಭಾರತಕ್ಕೆ ಬಂದ ಬೋಸರಿಗೆ ಇಲ್ಲಿನ ಸಂದರ್ಭಗಳು ಸವಾಲೊಡ್ಡಿದವು. ಆಗ ಗಾಂಧಿ ಕಾಂಗ್ರೆಸ್ಸನ್ನು ಪ್ರಬಲ ಅಹಿಂಸಾತ್ಮಕ ಸಂಘಟನೆಯನ್ನಾಗಿ ಮಾಡಿಕೊಂಡು ಅಸಹಕಾರ ಚಳುವಳಿ ಹೂಡಿದ್ದರು. ಭಾರತಕ್ಕೆ ಬಂದ ಬೋಸರು ಆ ಸಂಘಟನೆಯನ್ನು ಸೇರಿಕೊಂಡರು. ಬೋಸ್‌ರಿಗೆ ಬಂಗಾಳದ ರಾಜಕಾರಣಿ ಚಿತ್ತರಂಜನ್ ದಾಸ್ ಅವರ ನೇತೃತ್ವದಲ್ಲಿ ಕೆಲಸ ಮಾಡಲು ಗಾಂಧಿ ಸಲಹೆ ನೀಡಿದ್ದರು. ಅಲ್ಲಿ ಬೋಸ್ ಶಿಕ್ಷಣತಜ್ಞ, ಪತ್ರಕರ್ತ ಮತ್ತು ಬಂಗಾಳ ಕಾಂಗ್ರೆಸ್ ಸ್ವಯಂಸೇವಕರ ಕಮಾಂಡೆಂಟ್ ಆಗಿ ಅಚ್ಚರಿ ಮೂಡುವ ರೀತಿಯಲ್ಲಿ ಕೆಲಸ ನಿರ್ವಹಿಸಿದರು.

ಅವರ ಕುಶಲ ತಂತ್ರಗಳು, ಜಾಣತನದ ಯೋಜನೆಗಳು ಅತೀ ವೇಗವಾಗಿ ಬ್ರಿಟಿಷರ ನಿದ್ದೆಗೆಡಿಸಿದವು. ಇವರು ಕೈಗೊಳ್ಳುತ್ತಿದ್ದ ಚಟುವಟಿಕೆಗಳೆಲ್ಲವೂ ಬ್ರಿಟಿಷರಿಗೆ ನುಂಗಲಾರದ ತುತ್ತಾಗಿ ಡಿಸೆಂಬರ್ 1921 ರಲ್ಲಿ ಅವರನ್ನು ಜೈಲುವಾಸಕ್ಕೆ ಕಳಿಸಿದರು. ಅಲ್ಲಿಂದ ಬಿಡುಗಡೆ ಪಡೆದು ಬಂದ ಬೋಸರನ್ನು 1924 ರಲ್ಲಿ ಕಲ್ಕತ್ತಾ ಮುನ್ಸಿಪಲ್ ಕಾರ್ಪೊರೇಶನ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಿಸಲಾಯಿತು. ಆಗಲೂ ಜಾಣ್ಮೆಯಿಂದ ಬ್ರಿಟಿಷರ ವಿರುದ್ಧ ತಂತ್ರ ಹೆಣೆಯುತ್ತಲೇ ಇದ್ದ ಬೋಸರ ರಹಸ್ಯ ಕ್ರಾಂತಿಕಾರಿ ಚಳುವಳಿಗಳಿಗೆ ಹೆದರಿದ ಬ್ರಿಟಿಷ್ ಸರಕಾರ ಅವರನ್ನು ಬರ್ಮಾ ದೇಶಕ್ಕೆ ಗಡೀಪಾರು ಮಾಡುವ ಮೂಲಕ ಮತ್ತೊಮ್ಮೆ ನಿಟ್ಟುಸಿರು ಬಿಟ್ಟಿತು.

ಇತ್ತ ಚಿತ್ತರಂಜನ್ ದಾಸ್ ಅವರ ಮರಣದ ನಂತರ ಬಂಗಾಳದ ಕಾಂಗ್ರೆಸ್ ವ್ಯವಹಾರಗಳು ಅಸ್ತವ್ಯಸ್ತವಾಗಿದ್ದವು. 1927 ರಲ್ಲಿ ಬಿಡುಗಡೆಯಾದ ಕೂಡಲೇ ಬಂಗಾಳಕ್ಕೆ ಮರಳಿದ ಬೋಸರು ಕಾಂಗ್ರೆಸ್ ನ ಅತಂತ್ರ ಆಡಳಿತ ವ್ಯವಸ್ಥೆಯನ್ನು ಪುನಃ ಚೌಕಟ್ಟಿಗೆ ತಂದುನಿಲ್ಲಿಸುವ ಕಾರ್ಯವನ್ನು ಕೈಗೆತ್ತಿಕೊಂಡರು. ಬಂಗಾಳದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಪ್ರಧಾನ ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು. ಆದರೆ ಪಕ್ಷದಲ್ಲಿದ್ದ ಕೆಲವರ ರಾಜಕೀಯ ಸರ್ವಾಧಿಕಾರಿ ಧೋರಣೆ, ಪ್ರಚಾರದ ಹಪಹಪಿ, ಅಧಿಕಾರದ ದಾಹಗಳು ಬೋಸರಂತಹ ಧ್ಯೇಯನಿಷ್ಠ ಹೋರಾಟಗಾರರ ಅಸಮಾಧಾನಕ್ಕೆ ಕಾರಣವಾದವು. ಬ್ರಿಟಿಷರಿಗೆ ಯಾವುದೇ ತೀಕ್ಷ್ಣವಾದ ಉತ್ತರವನ್ನು ಕೊಟ್ಟು ಬಿಸಿ ಮುಟ್ಟಿಸಲಾಗದವರ ಪ್ರಲಾಪಗಳು ಕ್ರಾಂತಿಕಾರಿಗಳ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದವು. ಅದಾಗಲೇ ಕಾಂಗ್ರೆಸ್ ನ ಒಳಗೇ ಅಸ್ಪಷ್ಟವಾಗಿ ಎರಡು ಬಣಗಳು ಹುಟ್ಟಿಕೊಂಡಿದ್ದವು!

1930 ರಲ್ಲಿ ಕಾನೂನು ಅಸಹಕಾರ ಚಳುವಳಿಯನ್ನು ಆರಂಭಿಸಿದಾಗ ಬೋಸರನ್ನು ಭೂಗತ ಕ್ರಾಂತಿಕಾರಿ ಗುಂಪಿನೊಂದಿಗಿದ್ದ ಒಡನಾಟದ ಕಾರಣದಿಂದ ಬಂಧಿಸಲಾಯಿತು. ಆದರೆ ಅದೇ ವರ್ಷ ನಡೆದ ಚುನಾವಣೆಯಲ್ಲಿ ಕಲ್ಕತ್ತಾದ ಮೇಯರ್ ಆಗಿ ಬೋಸ್ ಆಯ್ಕೆಯಾದರು. ಈ ಮಧ್ಯೆ ತೀವ್ರ ಅನಾರೋಗ್ಯಕ್ಕೆ ಒಳಗಾದ ಬೋಸ್ ರಿಗೆ ಟಿ.ಬಿ. ಖಾಯಿಲೆ ಬಂದಿದೆ ಎಂದು ತಿಳಿಯಿತು. ಹೆಚ್ಚಿನ ಚಿಕಿತ್ಸೆಯ ನೆಪದಲ್ಲಿ ಅವರನ್ನು ವಿದೇಶಕ್ಕೆ ಕಳಿಸಿದರೆ ಯಾವುದೇ ಅಡ್ಡಿ–ಆತಂಕಗಳಿಲ್ಲದೇ ತಮ್ಮ ಕೆಲಸಗಳನ್ನು ನಡೆಸಬಹುದೆಂದು ಬ್ರಿಟಿಷರು ಚಿಂತಿಸಿದರು. 23 ಫೆಬ್ರುವರಿ 1933 ರಂದು ಯೂರೋಪ್ ನತ್ತ ಪಯಣ ಆರಂಭಿಸಿದ ಬೋಸರು 36ರ ವರೆಗೂ ವಿದೇಶದಲ್ಲಿದ್ದು ಭಾರತೀಯ ಕ್ರಾಂತಿಕಾರಿಗಳನ್ನು ಭೇಟಿಯಾಗಿ ಸಂಪರ್ಕ ಸಾಧಿಸಿದರು. ಯೂರೋಪ್ ಸಮಾಜವಾದಿಗಳನ್ನು ಭೇಟಿಯಾಗಿ ಭಾರತದ ಸ್ವಾತಂತ್ರ್ಯ ಚಳುವಳಿಗೆ ಬೆಂಬಲ ಕೋರಿದರು. ಇಟಲಿಯ ಸರ್ವಾಧಿಕಾರಿ ಬೆನೆಟ್ ಮುಸೋಲಿನಿಯನ್ನು ಭೇಟಿಯಾಗಿ ವಿಯೆನ್ನಾವನ್ನೇ ತಮ್ಮ ಚಟುವಟಿಕೆಯ ಕೇಂದ್ರವಾಗಿಸಿಕೊಂಡರು. ತೀವ್ರ ಅನಾರೋಗ್ಯದ ನಡುವೆಯೂ 'ದಿ ಇಂಡಿಯನ್ ಸ್ಟ್ರಗಲ್, 1920–1934' ಎಂಬ ಕೃತಿಯನ್ನು ರಚಿಸಿ, ಕ್ರಾಂತಿಕಾರಿಗಳಿಗೆ ಸಂದೇಶ ಮುಟ್ಟಿಸಿದರು.

27 ಮಾರ್ಚ್ 1936 ರಂದು ಭಾರತಕ್ಕೆ ಆಗಮಿಸಿದ ಬೋಸರನ್ನು ನೇರವಾಗಿ ಸೆರೆಮನೆಗೆ ಕಳುಹಿಸಲಾಯಿತು. ಜೈಲಿನಲ್ಲಿದ್ದುಕೊಂಡೇ ಬೋಸರು ಗಾಂಧಿಯ ಸ್ವಾತಂತ್ರ್ಯ ಹೋರಾಟದ ಶಾಂತಿಯುತ ವಿಧಾನವನ್ನು ಟೀಕಿಸುತ್ತಿದ್ದರು. ಅವರ ಅರ್ಥವಿಲ್ಲದ ನಿಲುವುಗಳನ್ನು ತೀವ್ರವಾಗಿ ಖಂಡಿಸುತ್ತಿದ್ದರು. ಒಂದು ವರ್ಷದ ನಂತರ ಬಿಡುಗಡೆಯಾದ ಮೇಲೆ 1938 ರಲ್ಲಿ ಹರಿಪುರದಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಬೋಸ್ ಮುಂದಾದರು. ಆ ಕಾರಣಕ್ಕಾಗಿ ಒಂದು ತಿಂಗಳ ಇಂಗ್ಲೆಂಡ್ ಪ್ರವಾಸ ಕೈಗೊಂಡು ಭಾರತೀಯ ವಿದ್ಯಾರ್ಥಿಗಳನ್ನು, ಭಾರತದ ಬಗ್ಗೆ ಮೃದು ನಿಲುವು ಹೊಂದಿದ್ದ ಲೇಬರ್ ಪಕ್ಷದ ನಾಯಕರನ್ನು, ರಾಜಕೀಯ ಚಿಂತಕರನ್ನು ಭೇಟಿಯಾಗಿ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ಕೋರಿದರು. ಭಾರತಕ್ಕೆ ಮರಳಿ 1938 ರಲ್ಲಿ ಕಾಂಗ್ರೆಸ್ ನ ಅಧ್ಯಕ್ಷರೂ ಆದರು. 1939 ರಲ್ಲಿ ಪುನರಾಯ್ಕೆ ಬಯಸಿದ ಬೋಸರನ್ನು ಸೋಲಿಸಲು ಗಾಂಧಿ ಮುಂದಾದರು. ಡಾ. ಪಟ್ಟಾಭಿ ಸೀತಾರಾಮಯ್ಯ ಎಂಬ ತನ್ನ ಚೇಲಾನನ್ನು ಮುಂದೆ ಮಾಡಿ ಚುನಾವಣೆಗೆ ನಿಲ್ಲಿಸಿದರು. ಆದರೆ ಭಾರತದ ವಿಜಯಕ್ಕೆ ತವಕಿಸುತ್ತಿದ್ದ ತರುಣ ಮನಸ್ಸುಗಳು ಬೋಸರನ್ನು ಗೆಲ್ಲಿಸಿದವು. ಸೋಲುಂಡ ಗಾಂಧಿ ಬೋಸರನ್ನು ಅಧ್ಯಕ್ಷರನ್ನಾಗಿ ಘೋಷಿಸುವ ಸಮಾರಂಭಕ್ಕೇ ಹೋಗದೆ ತಮ್ಮ ಸಣ್ಣಬುದ್ಧಿ ತೋರಿಸಿದರು. ಆದರೆ ಗಾಂಧಿಯವರ ನಿಜರೂಪದ ಅರಿವಿದ್ದ ಸುಭಾಸರು, ಗಾಂಧಿ ಕಾಂಗ್ರೆಸ್ಸನ್ನೇ ಎರಡು ಬಣಗಳಾಗಿ ಒಡೆಯುತ್ತಿದ್ದಾರೆ, ನಮ್ಮೆಲ್ಲರ ಗುರಿಯೂ ದೇಶದ ಸ್ವಾತಂತ್ರ್ಯವೇ ಆಗಿರಬೇಕೇ ಹೊರತು ವೈಯಕ್ತಿಕ ಪ್ರತಿಷ್ಠೆ ಹಾಗೂ ಮಹತ್ವಾಕಾಂಕ್ಷೆಗಳು ದೇಶದ ಹಿತಕ್ಕೆ ಮಾರಕವಾಗಬಾರದು ಎಂಬ ಉದ್ದೇಶದಿಂದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಅಷ್ಟೇ ಅಲ್ಲದೇ, 19 ಜನವರಿ 1941 ರಂದು ಜರ್ಮನಿ ಹಾಗೂ ಜಪಾನ್ ಗೆ ತೆರಳುವ ಮೂಲಕ ಈ ದೇಶದಿಂದಲೇ ಹೊರನಡೆದರು!

ಜರ್ಮನಿಯಲ್ಲಿ ಬ್ಯೂರೋ ಫಾರ್ ಇಂಡಿಯಾಕ್ಕೆ ಸೇರಿ, ಆಜಾದ್ ಹಿಂದ್ ರೇಡಿಯೋದ ಮೂಲಕ ನಿರಂತರ ಭಾಷಣ ಮಾಡಿ ದೇಶಾಭಿಮಾನಿಗಳಿಗೆ ಕರೆ ನೀಡಿದರು. ಜಪಾನಿನಲ್ಲಿ ಭಾರತೀಯ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸಿಕೊಂಡು, ಸುಮಾರು 40,000 ಸೈನಿಕರ ತರಬೇತಿ ಪಡೆದ ಸೈನ್ಯವನ್ನು ರಚಿಸಿದರು. ವಿದೇಶದಲ್ಲಿಯೇ ಆಜಾದ್ ಹಿಂದ್ ಫೌಜ್ ಎಂಬ ಸೈನ್ಯವನ್ನು ಕಟ್ಟಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಗೆದ್ದುಕೊಂಡರು! ಅವುಗಳಿಗೆ ಸ್ವರಾಜ್ ಮತ್ತು ಶಹೀದ್ ಎಂದು ಹೆಸರಿಟ್ಟು ಅಲ್ಲಿ ದಾಸ್ಯಮುಕ್ತ ಆಡಳಿತವನ್ನೂ ಆರಂಭಿಸಿದರು. 21 ಅಕ್ಟೋಬರ್ 1943 ರಂದು ತಾತ್ಕಾಲಿಕ ಸ್ವತಂತ್ರ ಭಾರತೀಯ ಸರ್ಕಾರವನ್ನು ಸ್ಥಾಪಿಸುವುದಾಗಿಯೂ ಬೋಸ್ ಘೋಷಣೆ ಮಾಡಿದ್ದರು. ಅಂಥ ಬೋಸ್ 18 ಅಗಸ್ಟ್ 1945 ರಲ್ಲಿ ತೈವಾನ್ ನಲ್ಲಿ ಕಣ್ಮರೆಯಾಗಿ, ಸ್ವಾತಂತ್ರ್ಯೋತ್ತರ ಭಾರತದ ಕನಸುಗಳೂ ಕಣ್ಮರೆಯಾದವು. ಬ್ರಿಟಿಷರ ಜೊತೆಜೊತೆಗೆ ಭಾರತದೊಳಗೇ ಇದ್ದ ಹೇಡಿಗಳಿಗೆ ತೀಕ್ಷ್ಣವಾಗಿ ಉತ್ತರ ಕೊಡುತ್ತಿದ್ದ ಆ ವೀರಕಲಿಯನ್ನು ನೆನೆಯದೇ ಇರಲಾದೀತೇ? ತನ್ನ ಸ್ವಾಭಿಮಾನ, ಹೋರಾಟ, ನೇರ ನಿಷ್ಠುರ ನಡೆ ನುಡಿಗಳಿಂದ ನಮ್ಮೊಂದಿಗಿರುವ ಆ ನೇತಾಜಿಯನ್ನು ಎಂದಾದರೂ ಮರೆಯಲಾದೀತೇ? ಇಂದಿಗೂ ಎಂದೆಂದಿಗೂ ಆ ಸಮರಕಲಿಯ ನೆನಪು ನಮ್ಮಂತರಂಗಗಳಲ್ಲಿ ಜೀವಂತ!

# ನಮ್ಮೂರ ಪ್ರವಾಸಿತಾಣ



## ಕನ್ನಡ ನಾಡಿನ ಮೊದಲ ರಾಜಧಾನಿ ಬನವಾಸಿ

ನಾಡಿನಲ್ಲಿರುವ ಪ್ರಮುಖ ಶಿವಾಲಯಗಳಲ್ಲಿ ಬನವಾಸಿಯ ಶ್ರೀಮಧುಕೇಶ್ವರ ದೇವಾಲಯವೂ ಒಂದು. ವರದಾ ನದಿಯ ದಂಡೆಯಮೇಲೆ ಸಂಪೂರ್ಣ ಶಿಲಾಮಯವಾಗಿ ವೈಶಿಷ್ಟ್ಯಪೂರ್ಣವಾಗಿರುವ ಈ ಕ್ಷೇತ್ರಕ್ಕೆ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಮಹತ್ವವೂ ಇದೆ.

ಮಹಾಭಾರತದ ಕಾಲದಲ್ಲಿ ಈ ಪ್ರದೇಶವನ್ನು 'ವನವಾಸಕ' ಮತ್ತು 'ವೈಜಯಂತಿ' ಎಂದು ಕರೆಯಲಾಗಿದೆ. ಸ್ಕಂದ ಪುರಾಣದಲ್ಲಿ ಉಲ್ಲೇಖವಾದಂತೆ ಮಧು-ಕೈಟಭರೆಂಬ ಮಹಾದೈತ್ಯ ರಾಕ್ಷಸರನ್ನು ಮಹಾವಿಷ್ಣು ಸಂಹರಿಸುತ್ತಾನೆ. ಶಿವಭಕ್ತರಾಗಿದ್ದ ಮಧುಕೈಟಭರ ಇಚ್ಛೆಯಂತೆ ಅವರ ಹೆಸರಿನಲ್ಲಿಯೇ 1.ಬನವಾಸಿಯಲ್ಲಿ ಶ್ರೀ ಮಧುಕೇಶ್ವರ ಮತ್ತು ಸಮೀಪದ 2.ಆನವಟ್ಟಿಯ ಕುಬಟೂರಿನಲ್ಲಿ ಕೈಟಭೇಶ್ವರ ಶಿವಲಿಂಗಗಳನ್ನು ಸ್ಥಾಪಿಸಿದರೆಂದು ಉಲ್ಲೇಖವಿದೆ.

ಇತಿಹಾಸದಲ್ಲಿ ಸಾಮ್ರಾಟನಾದ ಅಶೋಕ ಚಕ್ರವರ್ತಿಯು ಪ್ರಪಂಚದ ನಾನಾ ಭಾಗಗಳಿಗೆ ಧರ್ಮದೂತರನ್ನು ಕಳುಹಿಸಿದ್ದು ಬನವಾಸಿಗೆ 'ರಕ್ಷಿತ' ಎಂಬಾತನನ್ನು ಕಳುಹಿಸಿದ ಬಗ್ಗೆ ದಾಖಲಾಗಿದೆ.

ಈ ಸೀಮೆಯಲ್ಲಿ ಬೌದ್ಧಮತ ಬಹಳಷ್ಟು ಜನಪ್ರಿಯವಾಗಿತ್ತು. ಪ್ರಾಚೀನ ಬೌದ್ಧ ಧರ್ಮಗುರುಗಳು ವನಗಳಲ್ಲಿ ಗುಹೆಗಳಲ್ಲಿದ್ದು ಧ್ಯಾನ ನಿರತರಾಗುತ್ತಿದ್ದರು ಹಾಗಾಗಿ ಕ್ಷೇತ್ರಕ್ಕೆ ವನವಾಸಿ, ಬನವಾಸಿ ಎಂಬ ನಾಮ ಬಂದಿರುವ ಅಭಿಪ್ರಾಯಗಳು ಇವೆ. ನಂತರದ ದಿನಗಳಲ್ಲಿ ಜೈನಧರ್ಮದ ಪ್ರಭಾವವೂ ಬನವಾಸಿಯ ಮೇಲೆ ಆಯಿತು. ಆದಿಕವಿ ಪಂಪ ಜೈನಧರ್ಮದವರಾಗಿದ್ದು ಬನವಾಸಿಯನ್ನು ತನ್ನ ಕಾವ್ಯದಲ್ಲಿ ಕೊಂಡಾಡಿರುವುದು ನಮಗೆಲ್ಲಾ ತಿಳಿದೇ ಇದೆ.

ಇಲ್ಲಿನ ಜೀವನದಿಯಾಗಿರುವ ವರದೆಯು ಬನವಾಸಿಯನ್ನು ಮೂರು ಕಡೆಗಳಲ್ಲಿ ಮಾಲೆಯಂತೆ ಸುತ್ತುವರಿದಿದ್ದರಿಂದ ಬನವಾಸಿಗೆ ಭಾಗವತ ಪ್ರಭಾವದ ವೈಜಯಂತಿ ಪುರ ಎಂಬ ಅನ್ವರ್ಥಕ ನಾಮ ಬಂದಿತೆಂದು ಹೇಳಲಾಗುತ್ತಿದೆ.



ಇತಿಹಾಸ ಕಾಲದಲ್ಲಿ ಉನ್ನತ ವೇದ ವಿದ್ಯಾಭ್ಯಾಸಕ್ಕಾಗಿ ಪಲ್ಲವರ ರಾಜಧಾನಿಗೆ ಹೋಗಿದ್ದ ಮಯೂರ ವರ್ಮ, ಅಲ್ಲಿ ಅವಮಾನಿತನಾಗುತ್ತಾನೆ. ಅದನ್ನು ಪ್ರತಿಭಟಿಸಿ ಶೂರತನದಿಂದ ಹೋರಾಡಿ ಪಲ್ಲವರನ್ನು ಗೆಲ್ಲುತ್ತಾನೆ ಹಾಗೂ ಬನವಾಸಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಕರ್ನಾಟಕದ ಪ್ರಥಮ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದ ಎಂಬುದು ದಾಖಲಾಗಿದೆ. ಇಂಥ ಪೌರಾಣಿಕ ಐತಿಹಾಸಿಕ ಮಹತ್ವದ ಬನವಾಸಿಯಲ್ಲಿ ಉಮಾ ಮಧುಕೇಶ್ವರ ದೇವಾಲಯವು ಸಂಪೂರ್ಣ ಶಿಲಾಮಯವಾಗಿದ್ದು ಬೇರೆಬೇರೆ ರಾಜರ ಆಳ್ವಿಕೆಯಲ್ಲಿ ಬೆಳೆಯುತ್ತಾ ಬಂದಿದೆ. ಮಧ್ಯದಲ್ಲಿ ಮಧುಕೇಶ್ವರ ದೇವಾಲಯ ಹಾಗೂ ಅದರ ಪಕ್ಕದಲ್ಲಿಯೇ ಪಾರ್ವತಿ ದೇವಾಲಯವೂ ಇದೆ. ಸುತ್ತಲೂ ಪ್ರಾಕಾರ ದೇವತೆಗಳು ಹಾಗೂ ದಾಕ್ಪಾಲ ದೇವತೆಗಳಿರುವ ವಿಶಾಲ ದೇವಸ್ಥಾನವಿದು. ವರ್ಷವಿಡೀ ಸಾವಿರಾರು ಭಕ್ತರು ನಾಡಿನ ವಿವಿಧೆಡೆಗಳಿಂದ ಇಲ್ಲಿಗೆ ಬರುತ್ತಿರುತ್ತಾರೆ. ಸಂಕ್ರಾಂತಿ, ಯುಗಾದಿ, ರಥೋತ್ಸವ, ಲಕ್ಷದೀಪೋತ್ಸವ ಮಹಾಶಿವರಾತ್ರಿ, ಮುಂತಾದ ಆಚರಣೆಗಳನ್ನು ಮಧುಕೇಶ್ವರ ಸನ್ನಿಧಿಯಲ್ಲಿ ವಿಶೇಷವಾಗಿ ಆಚರಿಸಲಾಗುತ್ತಿದೆ. ಮಹಾಶಿವರಾತ್ರಿಯ ದಿನದಂದು ಸಾವಿರಾರು ಭಕ್ತರು ಆಗಮಿಸಿ ಮಧುವರ್ಣದ ಶ್ರೀಮಧುಕೇಶ್ವರ ಲಿಂಗಕ್ಕೆ ಜಲಾಭಿಷೇಕ, ಕ್ಷೀರಾಭಿಷೇಕ ಅಲ್ಲದೇ ತಮಗೆ ಇಷ್ಟವಾದ ಪದಾರ್ಥಗಳಿಂದ ಅಭಿಷೇಕ ಮಾಡಿ ಕೃತಾರ್ಥ ಭಾವ ಹೊಂದುತ್ತಾರೆ. ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಇಲ್ಲಿನ ರಥೋತ್ಸವ ಜರುಗುತ್ತದೆ. 412 ವರ್ಷ ಹಳೆಯದಾದ ರಥವನ್ನು ನಾವು ಈ ಕ್ಷೇತ್ರದಲ್ಲಿ ಕಾಣಬಹುದಾಗಿದೆ. ಕ್ಷೇತ್ರದ ಬಗ್ಗೆ ಬರೆಯಲು ಸಾಕಷ್ಟು ವಿಷಯಗಳಿವೆ. ಓದಿ ತಿಳಿಯುವುದಕ್ಕಿಂತ ಒಮ್ಮೆ ಬಂದು ವೀಕ್ಷಿಸೋಣ....!

# ಪತ್ರಿಕೆಯಲ್ಲಿ ಕಂಡಂತೆ

ಗಣರಾಜ್ಯೋತ್ಸವದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್

## ಸರ್ವತೋಮುಖ ಅಭಿವೃದ್ಧಿಗೆ ಬದ್ಧ



### ಬಿಜೆಪಿ ಕಚೇರಿಯಲ್ಲಿ ಎರಡು ಬಾರಿ ಹಾರಿದ ರಾಷ್ಟ್ರಧ್ವಜ



### ಕಾಂಗ್ರೆಸ್‌ನಿಂದ ಪೊಲಿಟಿಕಲ್ ಡೈಲಾಗ್







## ಸಂವಿಧಾನ ಆಶಯದಂತೆ ಸರ್ವರಿಗೂ ನ್ಯಾಯ



## ಜಿಲ್ಲೆಯ ಅಭಿವೃದ್ಧಿ ಹೆಚ್ಚಿಸಲು ಗಣಪತಿ ಉಳ್ವೇಕರ್‌ಗೆ ಮತ ನೀಡಿ: ಸಚಿವ ಹೆಬ್ಬಾರ್









ಫಲಾನುಭವಿಗಳಿಗೆ ಪ್ರಮಾಣಪತ್ರ ವಿತರಿಸಿದ ಸಚಿವ ಶಿವರಾಮ ಹೆಬ್ಬಾರ


## ಗ್ರಾಮ ಒನ್ ಸೇವೆಯಿಂದ ಬದುಕಿನಲ್ಲಿ ಬದಲಾವಣೆ..




## ಜಾತ್ರಾ ಮಹೋತ್ಸವಗಳಿಗೆ ಮುಲಾಜಿಲ್ಲದೇ ನಿರ್ಬಂಧ ಹೇರಿ

ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್ ಖಡಕ್ ಸೂಚನೆ





## ಉಳ್ವೇಕರಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ



## ವೈದ್ಯಕೀಯ ವೆಚ್ಚ ತಕ್ಷಣ ಪಾವತಿಸಿ

**ಬೆಂಗಳೂರು:** ವೈದ್ಯಕೀಯ ವೆಚ್ಚ ಮರುಪಾವತಿಯನ್ನು ತಕ್ಷಣ ಮರು ಪಾವತಿಸಬೇಕೆಂದು ಅಧಿಕಾರಿಗಳಿಗೆ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಸೂಚಿಸಿದ್ದಾರೆ.

ಕಾರ್ಮಿಕ ರಾಜ್ಯ ವಿಮಾ ನಿಗಮದ ಪ್ರಾದೇಶಿಕ ಮಂಡಳಿಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಮಾತನಾಡಿ, ರಾಜ್ಯದಲ್ಲಿರುವ ವಿಮಾ ಚಿಕಿತ್ಸಾಲಯಗಳನ್ನು ವೆಲ್‌ನೆಸ್ ಕೇಂದ್ರಗಳಾಗಿ ಪರಿವರ್ತಿಸಬೇಕು. ರಾಜ್ಯ ಕಾರ್ಮಿಕ ವಿಮಾ ಆಸ್ಪತ್ರೆಯಲ್ಲಿ ರೋಗಿಗಳ ಚಿಕಿತ್ಸೆಗಾಗಿ ಸಮರ್ಪಕವಾದ ಚಿಕಿತ್ಸೆಗಾಗಿ ಬೇಕಾಗಿರುವ ವೈದ್ಯಕೀಯ ಪರಿಕರಗಳನ್ನು ಪಟ್ಟಿ ಮಾಡಿ ಕೇಂದ್ರದ್ದೇ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಬೇಕೆಂದು ಹೇಳಿದರು.




ಆಸ್ಪತ್ರೆಗಳ ಅಭಿವೃದ್ಧಿಗಾಗಿ ಕೇಂದ್ರದಿಂದ ವಿಶೇಷ ಅನುದಾನ ಪಡೆಯಬಹುದು. ಆಸ್ಪತ್ರೆಯ ಅಭಿವೃದ್ಧಿ ಕಾಮಗಾರಿಯನ್ನು ಕೇಂದ್ರವು ನಿರ್ವಹಿಸುತ್ತಿರುವ ಕಾಮಗಾರಿಗಳು ವಿಳಂಬವಾಗುತ್ತಿವೆ. ಪ್ರಗತಿ ವರದಿಯನ್ನು ಸಚಿವಾಲಯಕ್ಕೆ ತಲುಪಿಸಬೇಕು. ಕೋವಿಡ್ ಸೋಂಕಿತರಿಗೆ ಸಮರ್ಪಕವಾಗಿ ಚಿಕಿತ್ಸೆ ನೀಡಬೇಕು. ಮಾಹಿತಿಯ ನಿರಿಯಲ್ಲಿ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಪಿ.ಕಲ್ಪನಾ, ನಿಗಮದ ಪ್ರಾದೇಶಿಕ ನಿರ್ದೇಶಕ ನಾಶು, ನಿಗಮದ ಸದಸ್ಯರು ಮತ್ತು ಪ್ರತಿನಿಧಿಗಳು ಉಪಸ್ಥಿತರಿದ್ದರು.

Bengaluru Edition
Jan 30, 2022 Page No. 3

## ಉಳ್ವೇಕರಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ



## ಪರಿಷತ್ ಚುನಾವಣೆ ಜಿಪಂ, ತಾಪಂ ಫಲಿತಾಂಶಕ್ಕೆ ಮುನ್ನುಡಿ

ಕಾರ್ಮಿಕ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ್ ಹೆಬ್ಬಾರ್



# ಪತ್ರಿಕೆಯಲ್ಲಿ ಕಂಡಂತೆ

## ಪ್ರತಿ ಜಿಲ್ಲೆಯಲ್ಲೂ ಕಾರ್ಮಿಕ ಭವನ

### ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ



## ಯಲ್ಲಾಪುರ ಕ್ಷೇತ್ರದಲ್ಲಿ ಬಿಜೆಪಿಗೆ ಹೆಚ್ಚು ಮತ

### ಸಚಿವ ಹೆಬ್ಬಾರ್‌ರ ಸಂಘಟಿತ ಪ್ರಯತ್ನ



## ಪ್ರತಿ ಜಿಲ್ಲೆಗೆ ಕಾರ್ಮಿಕ ಭವನ

### ಹುಬ್ಬಳ್ಳಿಯ ಕೃಷ್ಣಾಪುರದಲ್ಲಿ ನೂತನ ಕಾರ್ಮಿಕ ಭವನ ಉದ್ಘಾಟಿಸಿದ ಸಿಎಂ



ಒಂದೇ ಸೂರಿನಡಿ ಸಕಲ ಸೌಲಭ್ಯ ಲಭ್ಯ

## ಎಲ್ಲ ಜಿಲ್ಲಾ ಕೇಂದ್ರದಲ್ಲಿ ಕಾರ್ಮಿಕ ಭವನ ನಿರ್ಮಾಣ: ಬೊಮ್ಮಾಯಿ


### ಕಾರ್ಮಿಕ ಭವನ ಕಟ್ಟಡ ಉದ್ಘಾಟಿಸಿದ ಮುಖ್ಯಮಂತ್ರಿ





ಪ್ರಚಾರ ಸಭೆಯಲ್ಲಿ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ

## ವಿಪ ಚುನಾವಣೆ: ಉಳ್ವೇಕರ್ ಗೆಲುವು ನಿಶ್ಚಿತ



ಬಿಜೆಪಿ ಅಭ್ಯರ್ಥಿಗೆ ಪ್ರಥಮ ಪ್ರಾಶಸ್ತ್ಯ ಮತ ನೀಡಿ ಗೆಲ್ಲಿಸಿ

## ಜೆಡಿಎಸ್ ಕಾಂಗ್ರೆಸ್‌ಗೆ ಬೆಂಬಲ ನೀಡಲ್ಲ

### ನಮ್ಮ ಗೆಲುವಿನ ಓಟದ ತಡೆ ಅಸಾಧ್ಯ: ಸಚಿವ ಹೆಬ್ಬಾರ



ಕಾರ್ಮಿಕ ಇಲಾಖೆಯಿಂದ ಉಪಕ್ರಮ | ಯೋಜನೆಗೆ ಸಚಿವ ಶಿವರಾಂ ಹೆಬ್ಬಾರ್ ಚಾಲನೆ

## ಕಾರ್ಮಿಕರ ಮನೆಬಾಗಿಲಿಗೆ ಶ್ರಮಿಕ್ ಸಂಜೀವಿನಿ





## ಕೋವಿಡ್ ಮುಕ್ತತೆಗೆ ಸರ್ಕಾರ ನಿರ್ಧಾರ



## ಪರಿಷತ್ ಗೆಲುವಿನೊಂದಿಗೆ ಕಿಂಗ್ ಆಗಿ ಕಂಗೊಳಿಸಿದ ಸಚಿವ ಹೆಬ್ಬಾರ್

